6

# ಜೀವವನ್ನು ಉಜ್ಜೀವಿಸಿದ ಮನುಷ್ಯನು

## (2 ಅರಸು 4:18-37ಣಿ 8:1, 5)

ನಾವು ನಮ್ಮ ಅಧ್ಯಯನವಾದ ಎಲೀಷ ಮತ್ತು ಶೂನೇಮಿನ ಸ್ತ್ರೀಯ ಕಥೆಯನ್ನು ಮುಂದುವರೆಸೋಣ. ಹಿಂದಿನ ಪಾಠದಲ್ಲಿ ಎಲೀಷನು ಜೀವವನ್ನು *ಕೊಡುವವನಾಗಿದ್ದು,* ಉಪಕಾರಿಯಾದ ಆತನು ಗಂಡು ಮಗುವನ್ನು ಕೊಡುವುದಕ್ಕೆ ಸಾಧನವಾಗಿದ್ದನು ಎಂಬುದನ್ನು ನಾವು ನೋಡುತ್ತೇವೆ. ಈ ಪಾಠದಲ್ಲಿ, ಪ್ರವಾದಿಯು ಜೀವವನ್ನು *ಉಜ್ಜೀವಿಸುವವನು* ಎಂದು ನಾವು ನೋಡುತ್ತೇವೆ. ನಂತರದಲ್ಲಿ ಈ ಘಟನೆಯು ಸೂಚಿಸಲ್ಪಡುವಾಗ ಇವೇ ಪದಗಳು ಪದೇ ಪದೇ ಉಪಯೋಗಿಸಲ್ಪಡುತ್ತವೆ:

> … ಎಲೀಷನು ತಾನು *ಬದುಕಿಸಿದ* ಹುಡುಗನ ತಾಯಿಯೊಡನೆ ಮಾತನಾಡಿದನು … (2 ಅರಸು 8:1; ಒತ್ತಿ ಹೇಳಿದ್ದು ನನ್ನದು).

> ಎಲೀಷನು ಸತ್ತ ಹುಡುಗನಿಗೆ ಜೀವದಾನ ಮಾಡಿದ ಸಂಗತಿಯನ್ನು ಗೇಹಜಿಯು ವಿವರಿಸುತ್ತಿರುವಾಗಲೇ *ಜೀವದಾನ ಹೊಂದಿದ* ಹುಡುಗನ ತಾಯಿಯು ತನ್ನ ಹೊಲಮನೆಗಳಿಗಾಗಿ ಮೊರೆಯಿಡುವುದಕ್ಕೋಸ್ಕರ ಅರಸನ ಬಳಿಗೆ ಬಂದಳು. ಕೂಡಲೇ ಗೇಹಜಿಯು - "ಅರಸನೇ ನನ್ನ ಒಡೆಯನೇ ಎಲೀಷನು ಬದುಕಿಸಿದ ಹುಡುಗನು ಇವನೇ; ಈಕೆಯು ಇವನ ತಾಯಿ ಎಂದು ಹೇಳಿದನು" (2 ಅರಸು 8:5; ಒತ್ತಿ ಹೇಳಿದ್ದು ನನ್ನದು).

ಏನೇ ಆಗಲಿ, ಜೀವದಾನ ಮಾಡಿದವನು ದೇವರೇ ಎಂದು ನಾವು ಅರ್ಥೈಸಿಕೊಂಡಿದ್ದೇವೆ, ಆದರೆ ಆತನು ಅದನ್ನು ತನ್ನ ನಂಬಿಗಸ್ತ ಸೇವಕನ ಮೂಲಕ ಮಾಡಿದನು. ಈ ಪಾಠವು ಮುಗಿಯುವ ಮುನ್ನ, ಶೂನೇಮಿನ ಸ್ತ್ರೀಗೆ ಸಹಾಯ ಮಾಡಿದೆ ಅದೇ ದೇವರು ನಮ್ಮ ಜೀವಿತದಲ್ಲಿ ದುಃಖವು ಬಂದಾಗ ನಮಗೆ ಸಹಾಯ ಮಾಡುವವನಾಗಿದ್ದಾನೆ.

## ಸಂತೋಷ ಮತ್ತು ಹೃದಯ ಚೂರಾದದ್ದು (4:18-20)

**ಸಂತೋಷ**

ನಮ್ಮ ಹಿಂದಿನ ಪಾಠವು ಮುಗಿಯುತ್ತಿದ್ದಂತೆ, ಆ ಸ್ತ್ರೀಯು ಇನ್ನೂ ಈಗ ತನ್ನ ಹೊಸ ಶಿಶುವನ್ನು ಹೊಂದಿದ್ದಳು. ಮಗುವಿನ ಮೊದಲ ಮಾತು ಮಗುವಿನ ಮೊದಲ ಹೆಜ್ಜೆ ಇಂಥ ಅದ್ಭುತವಾದಂತಹ ಪ್ರತಿಯೊಂದು ಅನುಭವಗಳನ್ನು ಮುಂದಿನ ದಿನಗಳನ್ನು ಊಹಿಸಿಕೊಳ್ಳುವದು ಕಷ್ಟದ ಕೆಲಸವೇನಲ್ಲ.

ಈ ಪಾಠವು ತೆರೆದುಕೊಳ್ಳುತ್ತಿದ್ದಂತೆಯೇ, ಕೆಲವು ವರ್ಷಗಳು ಸಾಗಿಹೋಗಿರುತ್ತವೆ ಎರಡು ಅರಸು 4:18 ಹೇಳುವುದೇನೆಂದರೆ, "ಹುಡುಗನು ದೊಡ್ಡವನಾದ ಮೇಲೆ ಒಂದು ದಿವಸ ಹೊಲದಲ್ಲಿ ಕೊಯ್ಯುವವರ ಸಂಗಡ ಇದ್ದನು." ಈ ವಚನದಿಂದ ಆ ಹುಡುಗನು ಚಿಕ್ಕ ಮಗುವಾಗಿರುವಾಗಲೆ ಅಥವಾ ಇಪ್ಪತ್ತಕ್ಕಿಂತ ಮೊದಲೆ ಆತ ತೀರಿರ ಬಹುದು ಎಂಬ ಸೂಚನೆಯನ್ನು ನಮಗೆಕೊಡುತ್ತದೆ. ಆತನು ತಾಯಿಯ ತೊಡೆಯ ಮೇಲೆ ಕೂತುಕೊಳ್ಳುವಷ್ಟು

ಮತ್ತು ಆಕೆಯು ಆತನನ್ನು ಮೆಟ್ಟಿಲುಗಳಿಂದ ಮೇಲೆ ಒಯ್ಯುವಷ್ಟು ಆತನು ಚಿಕ್ಕವನಾಗಿದ್ದನು ಎಂಬುದನ್ನು ನಾವು ನಂತರದಲ್ಲಿ ಕಂಡುಕೊಳ್ಳುತ್ತೇವೆ (ವಚನಗಳು 20, 21). ಆತನು "ಮಗು" (ವಚನಗಳು 26, 34) ಮತ್ತು "ಕೂಸು" ಎಂದು ಕರೆಯಲ್ಪಡುತ್ತಿದ್ದನು (ವಚನಗಳು 29, 31, 32, 35). ಬಹುಶಃ ಆತನು ಸುಮಾರು ನಾಲ್ಕರಿಂದ ಆರು ವರ್ಷದವನಿದ್ದು, ತನ್ನ ತಂದೆಯ ಹಿಂದೆ ಹೊಲಕ್ಕೆ ಬರುವಷ್ಟು ಚಿಕ್ಕವನಾಗಿದ್ದನು.

ಇಲ್ಲಿ ಗಮನಿಸಬಹುದಾದಂತಹ ಮೂರು ಸಂಗತಿಗಳಿವೆ. ಮೊದಲನೆಯದು ತಾಯಿಯು ಹೊಲಕ್ಕೆ ಹೋಗಲೆಂದು ಅಪ್ಪಣೆಯನ್ನು ಕೊಟ್ಟಿದ್ದಳು ಎಂದು ವೇದಭಾಗವು ಹೇಳುವುದಿಲ್ಲ. ನಾನು ಮೂರು ವರ್ಷದವನಿರುವಾಗ, ನಾನು ನನ್ನ ಪುಸ್ತಕಗಳನ್ನು ಕೂಡಿಸಿಕೊಂಡು, ನನ್ನ ತಂದೆತಾಯಿಗಳ ಮನೆಯಿಂದ ನನ್ನ ತಂದೆಯು ಕಲಿಸುತ್ತಿದ್ದ ಚಿಕ್ಕ ಶಾಲೆಯ ಮನೆಗೆ ಹೋಗುತ್ತಿದ್ದೆನು (ಅದು ಆತನ ಮೊದಲ ಬೋಧನಾ ಉದ್ಯೋಗವಾಗಿತ್ತು ಇದರಿಂದ ಆತನು ಬಲು ನಾಚಿಕೆಗೊಳಗಾಗಿದ್ದನು). ನನ್ನ ಕಥೆಯಲ್ಲಿನ ಆ ಚಿಕ್ಕ ಕೂಸು ತನ್ನ ತಂದೆಯು ಎಲ್ಲಿದ್ದಾನೆಂದು ತಿಳಿದಿದ್ದನು ಮತ್ತು ಆತನ ತಾಯಿಗೆ ಹೇಳದೆಯೇ ಬಾಗಿಲ ಹೊರಗೆಹೋದನು. ಎರಡನೆಯದು, ಆ ಮಗುವು ತನ್ನ ತಾಯಿಯ ಅನುಮತಿಯನ್ನು ಪಡೆದುಕೊಂಡು ಹೋಗಿರಬಹುದು, ಸೇವಕನು ಆತನ ಜೊತೆಯಲ್ಲಿರಬಹುದು. ಬಹುಶಃ ಆ ಸೇವಕನೇ ಆತನನ್ನು ಹಿಂದಕ್ಕೆ ಎತ್ತಿಕೊಂಡು ಕರತಂದಿರಬೇಕು (ವಚನಗಳು 19, 20). ಮೂರನೆಯದು, ನಿಯಮದಂತೆ, ಹಳ್ಳಿಯ ಹುಡುಗರು ಚಿಕ್ಕ ವಯಸ್ಸಿನಲ್ಲಿಯೆ ಹೊಲದ ಕೆಲಸದಲ್ಲಿ ಪಾಲ್ಗೊಳ್ಳುತ್ತಿದ್ದರು. ತಂದೆಯು ತನ್ನ ಚಿಕ್ಕ ಮಗನನ್ನು ಸುಗ್ಗಿಯಲ್ಲಿ ಪಾಲ್ಗೊಳ್ಳುವುದನ್ನು ಕಣ್ಣಾರೆ ನೋಡಲು ಬಯಸಿರಬಹುದು.

ಇದು ಹೇಗೇ, ಸಂಭವಿಸಿರಲಿ, ಆ ಹುಡುಗನು ಹೊಲದಲ್ಲಿ ಕೊಯ್ಯುವ ಕೆಲಸ ಮಾಡುತ್ತಿದ್ದ ತಂದೆಯ ಕಡೆಗೆ ಹೋದನು (ವಚನ 18). ಇದು ಸುಗ್ಗಿಯ ಕಾಲ, ಅದೊಂದು ವರ್ಷದ ಬಲು ಗಡಿಬಿಡಿಯ ಕಾಲ, ಮತ್ತು ಎಲ್ಲಾ ಚಟುವಟಿಕೆಗಳು ಆ ಬಾಲಕನಿಗೆ ಕುತೂಹಲಮಯವಾಗಿದ್ದವು. ಆತನು ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಧಾನ್ಯದ ದಂಟಿನ ಮಧ್ಯೆ ಓಡಾಡುತ್ತಿದ್ದನು ಎಂದು ಚಿತ್ರಿಸಿಕೊಳ್ಳುತ್ತೇನೆ. ತಂದೆಯು ತನ್ನ ವೃದ್ಧಾಪ್ಯದಲ್ಲಿ ಮಗನನ್ನು ಆಗಾಗ್ಗೆ ಪ್ರೀತಿಯಿಂದ ಆತನ ಚಟುವಟಿಕೆಗಳನ್ನು ಅಲ್ಲಿಂದಲೇ ನೋಡುತ್ತಿದ್ದನು.

### ಹೃದಯ ಚೂರುಚೂರು ಆದದ್ದು

ಒಮ್ಮಲೇ, ನಾಶನವು ಅಪ್ಪಳಿಸಿತು. ಆ ಕೂಸು ತನ್ನ ತಲೆಯನ್ನು ಹಿಡಿದುಕೊಂಡು "ಅಪ್ಪಾ, ನನ್ನ ತಲೆ ನನ್ನ ತಲೆ" ಎಂದು ಚೀರಿದನು (ವಚನ 19ಎ). ಹುಡುಗನ ಕಾಯಿಲೆಯ ಬಗೆಗೆ ನಮಗೆ ಖಚಿತತೆ ಇಲ್ಲ. ಬಹುಮಟ್ಟಿಗೆ ಅದನ್ನು ಕೊಯ್ಲಿನ ಸಾಧನದಿಂದಾದ ತಲೆಯಲ್ಲಾದ ಗಾಯ ಎನ್ನಬಹುದು, ಯಾಕೆಂದರೆ ತಂದೆಯು ಕಾಣುವಂತಹ ಗಾಯವಾದ ಇದರ ಬಗೆಗೆ ತಂದೆಯು ಖಚಿತವಾಗಿ ಬಹುಕಾಳಜಿ ಯುಳ್ಳವನಾಗಿರಬಹುದು. ಬಿಸಿಲಿನ ಪ್ರದೇಶಗಳಲ್ಲಿ ಸಾಧ್ಯವಿರುವಂತಹ ಸೂರ್ಯನ ಅಧಿಕತಾಪದಿಂದ ಬರುವ ಮೂರ್ಛಾರೋಗದಿಂದ ಆ ಮಗುವು ಬಳಲುತ್ತಿದ್ದನು ಎಂದು ಬಲು ಹಳೆಯ ವಿಮರ್ಶೆಗಳು ಸಮರ್ಥಿಸುತ್ತವೆ (ನೋಡಿರಿ ಕೀರ್ತನೆ 121:6; ಯೆಶಾಯ 49:10). Donald J. Wiseman ಯೋಚಿಸುವುದೇನೆಂದರೆ, ಹೇಗೋ ಸೂರ್ಯನ ತಾಪದ ಮೂರ್ಛಾರೋಗವು "ಇದು ಮೈದಾನ ಪ್ರದೇಶದ ಚಿಕ್ಕ ಮಕ್ಕಳಲ್ಲಿ ಸುಗ್ಗಿಯ ಸಮಯದಲ್ಲಿ ವಿರಳವಾದದ್ದು"[1] ಎಂದು ಅಭಿಪ್ರಾಯ ಪಡುತ್ತಾರೆ. ರಕ್ತನಾಳಗಳು ತುಂಬಿಕೊಳ್ಳುವ ರೋಗ ಅಥವಾ ಮೆದುಳಿನ ಗಡ್ಡೆ ಎಂಬವುಗಳನ್ನು ಒಳಗೊಂಡಿರುವ ಸಾಧ್ಯವಿರುವ ಇತರ ವೈದ್ಯಕೀಯ ವಿವರಗಳು ಅಲ್ಲಿವೆ.[2] ರೋಗವು ಏನೇ ಇರಲಿ, ತಾಯಿಯ ಕಾಳಜೀಪೂರ್ವಕವಾದ ಲಕ್ಷ್ಯವಲ್ಲದೆ ಮತ್ತಿನ್ನೇನೂ ವಾಸಿಮಾಡದು ಎಂಬುದರಲ್ಲಿ ಯಾವ ತಪ್ಪೂ ಇಲ್ಲ ಎಂಬ ನಿರ್ಧಾರಕ್ಕೆ ತಂದೆಯು ಬಂದನು. ಆತನಿಗೆ ಮೇಲ್ವಿಚಾರಕ್ಕಾಗಿ ಹೊಲದಲ್ಲಿ

ಇರುವದು ಅವಶ್ಯವಾಗಿತ್ತು ಆದ್ದರಿಂದ ಆತನು ತನ್ನ ಸೇವಕನಿಗೆ “ಇವನನ್ನು ತಾಯಿಯ ಹತ್ತಿರ ಕರೆದುಕೊಂಡು ಹೋಗು” ಎಂದು ಹೇಳಿ ದನು (2 ಅರಸು 4:19ಬಿ).

ಆಕೆಯ ಮಗನನ್ನು ಮನೆಗೆ ತರಲ್ಪಟ್ಟದ್ದು ಆ ಸ್ತ್ರೀಗೆ ಎಂಥ ಅಘಾತವಾಗಿರಬಹುದು (ನೋಡಿರಿ ವಚನ 20ಎ). ಹಿಂದಿನ ದಿನದಲ್ಲಿ ಆತನು ಆಟವಾಡುತ್ತಿರುವುದನ್ನು ಆಕೆಯು ನೋಡಿದ್ದಳು; ಆಕೆಯು ಆತನ ಮುಗುಳ್ನಗೆಯನ್ನು ನೋಡಿದ್ದಳು; ಆತನ ದೊಡ್ಡ ನಗೆಯನ್ನು ನೋಡಿದ್ದಳು. ಈಗ ಆತನು ನರಳುತ್ತ ಸೇವಕನ ತೋಳುಗಳಲ್ಲಿ ಮಲಗಿದ್ದಾನೆ. ಆ ಮಗುವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಆತನನ್ನು ಹಿಡಿದು ತೊಡೆಯ ಮೇಲೆ ಹಾಕಿಕೊಳ್ಳುತ್ತಿದಂತೆಯೇ ಭಯವು ಆಕೆಯ ಹೃದಯವನ್ನು ಹಿಡಿಯಿತು (ನೋಡಿರಿ 20ಬಿ). “ಅಮ್ಮಾ, ನನ್ನ ತಲೆಯು ನೋಯುತ್ತಿದೆ; ನನ್ನ ತಲೆ ನೋವಾಗುತ್ತಿದೆ; ಅದನ್ನು ನಿಲ್ಲಿಸು” ಎಂದು ಆ ಕಂದನು ಆಕ್ರಂದಿಸಿದಾಗ ನಿಜವಾಗಿಯೂ ಅವಳ ಕಣ್ಣೀರು ಹರಿದಿರಬಹುದು! ಆಕೆಯು ಮಗುವನ್ನು ಸಮಾಧಾನ ಮಾಡಲು ಇತರೆ ತಾಯಂದಿರು ಮಾಡುವಂತೆ ಆಕೆಯು ಕೂಡಾ ಹಿಂದಕ್ಕೂ ಮುಂದಕ್ಕೂ ಓಲಾಡುತ್ತಾ ಆತನನ್ನು ಸಂತೈಸಿರಬೇಕು ಎಂಬುದನ್ನು ನನ್ನ ಮನದಲ್ಲಿ, ನಾನು ಚಿತ್ರೀಕರಿಸಿಕೊಳ್ಳುತ್ತೇನೆ. ತಣ್ಣನೆಯದನ್ನು ಹಚ್ಚುತ್ತಾ ತಣ್ಣೆಯ ಬಟ್ಟೆಯನ್ನು ಆತನ ತಲೆಯ ಮೇಲಿಡುತ್ತಾ ಮುದ್ದುಗಳಿಂದ ಆತನ ಮುಖವನ್ನು ಮೃದುಗೊಳಿಸುತ್ತಾ ಇದ್ದ ಆಕೆಯ ಯೋಚನೆಗಳನ್ನು ನಾನು ಊಹಿಸಿಕೊಳ್ಳಬಲ್ಲೆ: “ಆತನು ಸಾಯಲಾರನು! ಇಲ್ಲವೇ ಇಲ್ಲ. ದೇವರೇ ಆತನನ್ನು ನನಗಾಗಿ ಕೊಟ್ಟಿದ್ದಾನೆ; ಆತನು ಖಚಿತವಾಗಿ ನನ್ನಿಂದ ಎಂದಿಗೂ ತೆಗೆದುಕೊಳ್ಳಲಾರನು!”[3] “ದೇವರೇ ನನ್ನ ಮಗನನ್ನು ಸಾಯಲು ಬಿಡಬೇಡ! ಆತನನ್ನು ಸಾಯಲು ಬಿಡಬೇಡ!” ಎಂದು ಅವಳು ತನ್ನ ವೇದನೆಯುಕ್ತ ಪ್ರಾರ್ಥನೆಗಳನ್ನು ಪರಲೋಕಕ್ಕೆ ಕಳಿಸಿರಲೇಬೇಕು.

ಆಕೆಯು ಪ್ರೀತಿಯನ್ನು ತೋರಿದ್ದಾಗ್ಯೂ, ಅವಳ ಮಗನನ್ನು ಪುನರುಜ್ಜಿಸುವುದಕ್ಕೆ ಎಷ್ಟೇ ಪ್ರಯತ್ನಿಸಿದ್ದಾಗ್ಯೂ, ಅವಳು ಹೃದಯಪೂರ್ವಕವಾಗಿ ಪ್ರಾರ್ಥನೆ ಮಾಡಿದ್ದಾಗ್ಯೂ ಆ ಹುಡುಗನು ಕೃಶವಾಗುತ್ತಾ ಹೋದನು. ಆ ಮಗುವಿನ ಅಳುವು ಕ್ಷೀಣಿಸುತ್ತಾ ಕೊನೆಯಲ್ಲಿ ಅದು ನಿಂತುಹೋಯಿತು. ಆತನು ಅಂತಿಮವಾದ ಉಸಿರನ್ನು ತೆಗೆದುಕೊಂಡನು ಮತ್ತು ಆತನ ದೇಹವು ನಿಶ್ಚಲವಾಯಿತು. ನಮ್ಮ ವೇದಭಾಗವು ಸರಳವಾಗಿ “ಹುಡುಗನು ಮಧ್ಯಾಹ್ನದವರೆಗೂ ತಾಯಿಯ ತೊಡೆಯ ಮೇಲಿದ್ದುಕೊಂಡು ಆ ನಂತರ ಸತ್ತನು” (ವಚನ 20ಬಿ, ಸಿ) ಎಂದು ಹೇಳುತ್ತದೆ. ಯಾರು ಬೈಬಲಿನ ಅದ್ಭುತಗಳನ್ನು ನಂಬುವುದಿಲ್ಲವೋ ಅವರು ಆ ಹುಡುಗನು ಕೇವಲ ಮೂರ್ಛಾವಸ್ಥೆಯಲ್ಲಿರಬಹುದು ಎಂದು ಹೇಳುತ್ತಾರೆ. ಆದರೆ ಇತಿಹಾಸಕಾರರು ಇದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ.[4] “ಆತನು ಸತ್ತನು” (ವಚನ 32ನ್ನು ಸಹ ನೋಡಿರಿ).

ಮಕ್ಕಳು, ಮುಗ್ಧ ಮಕ್ಕಳು, ಸಾಯಬಹುದೇ? ಇದನ್ನು ನಾವು ಪ್ರತಿದಿನ ನೋಡುತ್ತೇವೆ. ಅವರು ಯಾಕೆ ಸಾಯುತ್ತಾರೆ? ಯಾಕೆಂದರೆ ನಾವು ಪಾಪದಿಂದ ಭಗ್ನವಾದ ಲೋಕದಲ್ಲಿ ಇದ್ದೇವೆ. ಬಹು ಹಿಂದೆ ಆದಾಮ ಮತ್ತು ಹವ್ವರಿಗೆ ಅವರು ಒಂದು ವೇಳೆ ತಿನ್ನಬೇಡ ಎಂದು ಹೇಳಲಾದ ಹಣ್ಣನ್ನು ತಿಂದದ್ದಾದರೆ ಅವರು “ಸಾಯುವದು ಖಚಿತ” ಎಂದು ಹೇಳಲ್ಪಟ್ಟಿತ್ತು (ಆದಿಕಾಂಡ 2:17). ಅವರ ಅವಿಧೇಯತೆ ನಂತರ “ಮರಣವು ಎಲ್ಲಾ ಮನುಷ್ಯರ ಮೇಲೆ ಹರಡಿತು” (ರೋಮಾಪುರ 5:12); ಇದು ಸಾರ್ವತ್ರಿಕ ಸ್ಥಿತಿಯಾಗಿ ಪರಿಣಮಿಸಿತು. “ಒಂದೇ ಸಾರಿ ಸಾಯುವದು ... ಮನುಷ್ಯರಿಗೆ ನೇಮಕವಾಗಿದೆ” (ಇಬ್ರಿಯ 9:27). ಕೆಲವರು ತಮ್ಮ ವೃದ್ಧಾಪ್ಯದ ದಿನಗಳಲ್ಲಿ, ಕೆಲವರು ತಮ್ಮ ಮಧ್ಯಮ ವಯಸ್ಸಿನಲ್ಲಿ, ಮತ್ತು ಹೌದು ಕೆಲವರು ತಮ್ಮ ಬಾಲ್ಯದ ದಿನಗಳಲ್ಲಿ ಮರಣಹೊಂದುತ್ತಾರೆ. ಇಂಥ ದುರಂತಗಳು ಪರಲೋಕದ ಮನೆಯು ಶಾಶ್ವತವಾದದ್ದೆಂದೂ “ಇನ್ನೂ ಮರಣವು ಇರುವುದಿಲ್ಲವೆಂದೂ” (ಪ್ರಕಟನೆ 21:4) ತಿಳಿಸುವಂತವುಗಳಾಗಿವೆ, ನಾವು ನಮ್ಮ ಕೈಗಳಿಂದ ಕಸಿದುಕೊಳ್ಳಲ್ಪಟ್ಟ ಅಮೂಲ್ಯವಾದ

ಚಿಕ್ಕವರೊಡನೆ ತಿರುಗಿ ಸೇರಿಕೊಳ್ಳುತ್ತೇವೆ ಎಂದೂ ಸೂಚಿಸುವವುಗಳಾಗಿವೆ (ನೋಡಿರಿ 2 ಸಮುವೇಲ 12:23).

## ಯೋಜನೆಯೋ ಮತ್ತು ಭಿನ್ನಹವೋ? (4:21-31)

**ಯೋಜನೆಯೋ?**

ತನ್ನ ಮಗನು ಮರಣಹೊಂದಿದನು ಎಂಬುದು ಅರಿವಾದೊಡನೆ ಶೂನೇಮಿನ ಸ್ತ್ರೀಯು ಹೇಗೆ ಪ್ರತಿಕ್ರಯಿಸಿದಳು? ಕಣ್ಣೀರಿನಿಂದ ಮೂರ್ಚೆಹೊಂದುವುದನ್ನು ನಾವು ಎದುರುನೋಡಬಹುದು. ಅವಳು ತನ್ನ ಸ್ನೇಹಿತೆಯರನ್ನು ತನಗಾಗಿ ಅಳಲು ಕರೆಯುವುದನ್ನು ನಾವು ಎದುರು ನೋಡಬಹುದಾಗಿದೆ. ಅವಳು ತನ್ನ ಸೇವಕರನ್ನು ಕರೆದು ದೇಹವನ್ನು ಹೂಣುವುದಕ್ಕೆ ಸಿದ್ಧತೆಯನ್ನು ಮಾಡಲು ಸೂಚಿಸುವುದನ್ನು ನಾವು ಎದುರು ನೋಡಬಹುದಾಗಿದೆ. ಅದರ ಬದಲಾಗಿ, ಆಕೆಯು ಅದಕ್ಕೆ ವ್ಯತಿರಿಕ್ತವಾದ ಸಂಗತಿಯನ್ನು ಮಾಡಿದಳು: "ಕೂಡಲೇ ಆಕೆಯು ದೇವರ ಮನುಷ್ಯನ ಕೋಣೆಗೆ ತೆಗೆದುಕೊಂಡು ಅವನ ಮಂಚದ ಮೇಲೆ ಮಲಗಿಸಿ ಬಾಗಿಲು ಮುಚ್ಚಿ ಹೊರಗೆ ಹೋದಳು" (2 ಅರಸು 4:21). ಅವಳು ಏನನ್ನು ಮಾಡುತ್ತಿದ್ದಾಳೆ ಎಂಬುದು ನನಗೆ ಸ್ವಂತವಾಗಿ ತಿಳಿದಿಲ್ಲ. ಆ ಕ್ಷಣದಲ್ಲಿನ ಆಕೆಯ ಮನದಲ್ಲಿನ ವಿಚಾರಗಳೇನು ಎಂದು ನಾನು ತಿಳಿಯಲಾರೆ. ಈ ಕೆಳಗಿನ ಸಂಗತಿಗಳು ಆ ಸ್ಥಿತಿಯನ್ನು ಸ್ಪಷ್ಟೀಕರಿಸಬಹುದು ಅಥವಾ ಇಲ್ಲದೇ ಇರಬಹುದು.

(1) ಪ್ರವಾದಿಯ ಕೋಣೆಯು ಬಹುಶಃ ಆಕೆ ಮನೆಯಿಂದ ಸ್ವಲ್ಪದೂರದಲ್ಲಿರುವ ಕೋಣೆಯಾಗಿರಬಹುದು. ಆ ಸ್ತ್ರೀಯು ಹೊರಬರುವುದಕ್ಕಾಗಿ ಕೆಲ ತಾಸುಗಳನ್ನು ತೆಗೆದುಕೊಂಡಿರಬಹುದು. ಆಕೆಯು ತನ್ನ ಮಗನ ದೇಹವನ್ನು ಎಲೀಷನ ಕೋಣೆಯಲ್ಲಿ ಇಟ್ಟಿದ್ದಕ್ಕೆ ಯೋಗ್ಯವಾದ ಸಂಗತಿ ಎಂದರೆ ಅವಳು ಹೊರಗೆ ಹೋದಾಗ ಅದನ್ನು ಯಾರು ಕೂಡಾ ತೊಂದರೆ ಪಡಿಸಬಾರದು ಎಂಬ ಉದ್ದೇಶದಿಂದಲೇ. ಒಂದು ನಿಯಮದಂತೆ ಯೆಹೂದಿಗಳು ಮರಣಹೊಂದಿದ ವ್ಯಕ್ತಿಗಳ ದೇಹವನ್ನು ಅವರು ಮರಣಹೊಂದಿದ ದಿನವೇ ಹೂಳುತ್ತಿದ್ದರು. ಹೂಳುವ ಪ್ರಕ್ರಿಯೆಗಳು ತನ್ನ ಮಗನಿಗಾಗಿ ಪ್ರಾರಂಭವಾಗಬಾರದೆಂದು ಆ ತಾಯಿಯು ಬಹುಶಃ ಬಯಸಿರಬಹುದು.

(2) ಪ್ರಾಯಶಃ ಪ್ರವಾದಿಯ ಕೋಣೆಯು ಮನೆಯ ಹತ್ತಿರವಿರುವ ಕೋಣೆಗಳಲ್ಲಿ ಇದೂ ಕೂಡ ಒಂದಾಗಿರಬಹುದು. ಅದರೊಡನೆಯೇ, ಆ ಸ್ತ್ರೀಯ ಸ್ವಂತದ ಮಲಗುವ ಕೋಣೆಯಂತಹ ಇತರವುಗಳೂ ಕೂಡ ಅಲ್ಲಿರಬಹುದು ಎಂದು ನಾನು ಸೂಚಿಸುವವನಾಗಿದ್ದೇನೆ. ವಾಸ್ತವವಾಗಿ ಆ ತಾಯಿಯು ತನ್ನ ಮಗನನ್ನು ಪ್ರವಾದಿಯ ಕೋಣೆಯಲ್ಲಿ ಇಟ್ಟಳು ಮತ್ತು ಪ್ರವಾದಿಯನ್ನು ನೋಡಲು ಹೋದಳು ಎಂದು ಸೂಚಿತವಾಗಿದೆ, ಇನ್ನೊಂದು ರೀತಿಯಲ್ಲಿ, ಅವಳು ಎಲೀಷನ ಮಧ್ಯ ಪ್ರವೇಶಿಸುವಿಕೆಯನ್ನು ಎದುರುನೋಡುವವಳಾಗಿದ್ದಳು.

ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡಂತಹ ನಾವು ನಮ್ಮ ಕಥೆಯನ್ನು ಮುಂದುವರೆಸೋಣ. ತನ್ನ ಮಗನನ್ನು ಪ್ರವಾದಿಯ ಕೋಣೆಯಲ್ಲಿ ಇರಿಸಿದ ಆ ಸ್ತ್ರೀಯು, "ತನ್ನ ಗಡನನ್ನು ಕರೆಸಿದಳು" (ವಚನ 22ಎ). ಬಹುಶಃ ಆಕೆಯು ಅತನಿರುವ ಹೊಲಕ್ಕೆ ಹೋಗಿರಬಹುದು. ಆಕೆಯು ಆತನಿಗೆ, "ದಯವಿಟ್ಟು ನನಗೋಸ್ಕರ ಒಬ್ಬ ಸೇವಕನನ್ನೂ ಒಂದು ಕತ್ತೆಯನ್ನೂ ಕಳುಹಿಸು; ನಾನು ಬೇಗನೇ ದೇವರ ಮನುಷ್ಯನ ಬಳಿಗೆ ಹೋಗಿಬರುತ್ತೇನೆ" ಎಂದು ಹೇಳಿದಳು (ವಚನ 22ಬಿ). "ದೇವರ ಮನುಷ್ಯ" (ವಚನ 9) ಹೀಗೆ ಆಕೆಯು ಎಲೀಷನನ್ನು ಕರೆದಳು.

ಆಕೆಯು ಎಲೀಷನೆಡೆಗೆ ಯಾಕೆ ಹೋಗಬಯಸಿದಳು ಎಂಬುದನ್ನು ವೇದಭಾಗವು ನಮಗೆ ಹೇಳುವುದಿಲ್ಲ. ಪ್ರವಾದಿಯು ಇರುವಲ್ಲಿ ಆಕೆಯು ತಲುಪಿದ ಕೂಡಲೇ ಆಕೆಯು

ತನ್ನ ಅಸಂತೋಷವನ್ನು ಹೊರಗೆ ಹಾಕಿದಳು (ವಚನ 28), ಆದರೆ ಖಚಿತವಾಗಿ ಅವಳು ತನ್ನ ಮಗನ ದೇಹವನ್ನು ಬಿಟ್ಟುಬಿಡಲಿಲ್ಲ ಮತ್ತು ಕೇವಲ ದೂರುಕೊಡಲೆಂದೆ ಇಷ್ಟು ದೂರದ ಪ್ರಯಾಣವನ್ನು ಅವಳು ಮಾಡಿರಲಿಲ್ಲ. ವಾಸ್ತವವೆಂದರೆ ಎಷ್ಟುಬೇಗ ಸಾಧ್ಯವೋ ಅಷ್ಟು ಬೇಗನೇ ಮಾಡಿದ ಪ್ರಯಾಣ (ವಚನ 24) ಮತ್ತು ವಾಸ್ತವವಾಗಿ ಎಲೀಷನು ತನ್ನೊಡನೆ ಮರಳಬೇಕೆಂಬ ಅವಳು ಹೊಂದಿದ ಸೂಚನೆ (ವಚನ 30) ಇದಾಗಿದೆ. ಪ್ರವಾದಿಯು ಸಾಧ್ಯ ವಾದಷ್ಟು ಬೇಗನೇ ತನ್ನ ಮಗನ ದೇಹದ ಜೊತೆಯಲ್ಲಿ ಪ್ರವಾದಿಯ ಕೋಣೆಯಲ್ಲಿ ಇರಬೇ ಕೆಂದು ಆಕೆಯು ಬಯಸುವವಳಾಗಿದ್ದಳು ಎಂಬುದನ್ನು ಇದು ಸೂಚಿಸುತ್ತದೆ.

ಹಿಂದಿನ ಪಾಠದಲ್ಲಿ, ಆ ಸ್ತ್ರೀಯ ಮನೆಯ ಅನೇಕ ಊಟದ ಸಮಯದ ಆರಂಭದಲ್ಲಿ, ಎಲೀಷನು ತನ್ನ ಗುರುವಾದ ಎಲೀಯನ ಅನೇಕ ಬಗೆ ಬಗೆಯ ಕಥೆಗಳನ್ನು ಹೇಳಿರಬಹುದು. ಹಾಗಿದ್ದಲ್ಲಿ, ಅದರಲ್ಲಿ ಒಂದು ಅದ್ಭುತವಾದ ಕಥೆಯಾದ ಎಲೀಯನು ಚಾರೆಪ್ತಾದ ವಿಧವೆಯ ಮಗನನ್ನು ಬದುಕಿಸಿದ ಕಥೆಯನ್ನು ಆತನು ನಿಶ್ಚಿತವಾಗಿ ಹಂಚಿಕೊಂಡಿರಲೇಬೇಕು (1 ಅರಸು 17:17-24). ಸತ್ಯವೇದಿಯ ಆಧಾರಗಳಿಗೆ ಸಂಬಂಧಿಸಿದಂತೆ, ಇದಕ್ಕಿಂತ ಮುಂಚೆ ಸತ್ತವನನ್ನು ಎಬ್ಬಿಸಿದ ಘಟನೆಯು ಎಲ್ಲಿಯೂ ಇಲ್ಲ ಯಾರೋಬ್ಬನೂ ಇಲ್ಲ. ಶೂನೇಮಿನ ಸ್ತ್ರೀಯು ಈ ಕಥೆಯನ್ನು ಕೇಳಿದ್ದಾದರೆ, ಎಲೀಷನು ಎಲೀಯನ ಸೇವೆಯಿಂದ ಅದರಂತೆಯೇ ಮಾಡಿದ ಹಾಗೆ ಈ ಅದ್ಭುತವನ್ನು ಮಾಡುವನು ಎಂಬ ನಿರೀಕ್ಷೆಯನ್ನು ಹೊಂದಿದ್ದಳು (2 ಅರಸು 2:14ರ ಜೊತೆ 2 ಅರಸು 2:8ನ್ನು ಹೋಲಿಸಿರಿ; 2 ಅರಸು 4:1-7ರ ಜೊತೆ 1 ಅರಸು 17:8-16ನ್ನು ಹೋಲಿಸಿರಿ). Wiseman ರವರು, "ಆ ಸ್ತ್ರೀಯು ಮಗನನ್ನು ಕಳೆದುಕೊಂಡಿದ್ದಳು ಆದರೆ ನಂಬಿಕೆಯನ್ನಲ್ಲ" ಎಂದು ದೃಢವಾಗಿ ಹೇಳಿದ್ದಾರೆ.[5]

ಆ ಸ್ತ್ರೀಯ ಪ್ರೇರಣೆ ಏನೇ ಆಗಿರಲಿ, ಆಕೆಯು ತನ್ನ ಗಂಡನಿಗೆ ಒಬ್ಬ ಸೇವಕನನ್ನು ಮತ್ತು ಕತ್ತೆಯನ್ನು ಕೇಳಿದಳು ಯಾಕೆಂದರೆ ಆದಲಿಂದ ತಾನು ಎಲೀಷನೆಡೆಗೆ ಓಡಿ ಹೋಗಿ ಆತನನ್ನು ಕರೆತರಲೆಂದೆ (ವಚನ 22ಬಿ). ತನ್ನ ಹೆಂಡತಿಯು ಪ್ರವಾದಿಯು ಇರುವಲ್ಲಿಗೆ ಹೋಗಲು ಬಯಸಿದ್ದುದನ್ನು ಕೇಳಿ ಆ ವ್ಯಕ್ತಿಯು ಆಶ್ಚರ್ಯಚಕಿತನಾಗಲಿಲ್ಲ. ಆತನು ಕೇವಲ ಆ ಸಮಯಕ್ಕಾಗಿ ಆಶ್ಚರ್ಯಚಕಿತನಾದನು. "ಇಂದು ಅವವಾಸ್ಯೆಯಲ್ಲ, ಸಬ್ಬತ್ತಲ್ಲ, ಈ ಹೊತ್ತು ಯಾಕೆ ಹೋಗುತ್ತಿ?" (ವಚನ 23ಎ) ಎಂದು ಕೇಳಿದನು. ಸಬ್ಬತ್ತು ಮತ್ತು ಅಮಾವಾಸ್ಯೆಗಳು ಯೆಹೂದಿಗಳ ಧಾರ್ಮಿಕ ಚಟುವಟಿಕೆಗಳ ದಿನಗಳಾಗಿದ್ದವು (ನೋಡಿರಿ ವಿಮೋಚನಕಾಂಡ 20:8-11; ಅರಣ್ಯಕಾಂಡ 29:6; ನೆಹಮೀಯ 10:33; ಕೀರ್ತನೆ 81:3). ಆ ಸಂದರ್ಭಗಳಲ್ಲಿ ಮೂರ್ತಿಪೂಜೆ ಮಾಡುವವರ ಪ್ರದೇಶದಲ್ಲಿ ನಂಬಿಗಸ್ತರಾದವರು ಆ ದಿನಗಳಲ್ಲಿ ಕೂಡಿಬರುತ್ತಿದ್ದರು. ಹೇಗೋ ಆ ದಿನವು (ಶೂನೇಮಿನ ಸ್ತ್ರೀಯು ಎಲೀಷನೆಡೆಗೆ ಹೋಗಲು ಬಯಸಿದ ದಿನ) ವಿಶೇಷವಾದ ದಿನಗಳಲ್ಲಿ ಒಂದಾಗಿಲ್ಲದ್ದರಿಂದ ಆಕೆಯ ಗಂಡನು ತನ್ನ ಹೆಂಡತಿಯು ಪ್ರವಾದಿಯ ಬಳಿಗೆ ಹೋಗುವ ಇಚ್ಛೆಯಿಂದ ಆಶ್ಚರ್ಯಚಕಿತನಾದನು.

ಆ ಸ್ತ್ರೀಯು ಆ ಪ್ರಶ್ನೆಗೆ ಉತ್ತರಿಸಲಿಲ್ಲ. ಆಕೆಯು ಕೇವಲ "ಚಿಂತೆಯಿಲ್ಲ" (2 ಅರಸು 4:23ಬಿ) ಎಂದು ಹೇಳಿದಳು. ಕೆಲವರು ಹೇಳುವಂತೆ "ಚಿಂತೆಯಿಲ್ಲ" ಎಂಬ ಪದಗಳು ತನ್ನ ಮಗನು ಬದುಕುವುದರಲ್ಲಿ ಯಾವುದೇ ಸಂಶಯವು ಆ ಸ್ತ್ರೀಗೆ ಇರಲಿಲ್ಲ ಆದರೆ ಎಲೀಷನಿಗಾಗಿನ ಆಕೆಯ ಮೊದಲ ಮಾತುಗಳು ಒಂದು ರೀತಿಯ ವಿಶ್ವಾಸವನ್ನು ಪ್ರತಿಬಿಂಬಿಸುವಂತದ್ದಾಗಿರಲಿಲ್ಲ ಎಂದು (ವಚನ 28). ಇತರರು ನಂಬುವುದೇನೆಂದರೆ ಆಕೆಯ ಮಗನ ಜೊತೆಗೆ ಎಲ್ಲವೂ ಒಳ್ಳೇಯದಾಗುತ್ತದೆ ಯಾಕೆಂದರೆ ಆತನು ದೇವರ ಮಗನಾಗಿದ್ದಾನೆ ಎಂದು ಆಕೆಯ ಮಾತುಗಳು ಸೂಚಿಸುವವುಗಳಾಗಿವೆ. ಒಂದು ಚಿಕ್ಕ ಮಗುವು ಮರಣಹೊಂದಿದಾಗ, ಆತನ ಆತ್ಮವು ಕರ್ತನೊಡನೆ ವಾಸಿಸಲು ಹೋಗುತ್ತದೆ (ನೋಡಿರಿ 2 ಸಮುವೇಲ 12:23) ಮತ್ತು ಇದು ವ್ಯಥೆಗೊಂಡಂತಹ ಪ್ರತಿಯೊಬ್ಬ ಪೋಷಕರಿಗೆ ದೊಡ್ಡ ಸಮಾಧಾನವಾಗಿದೆ. ತಿರುಗಿ ಎಲೀಷನಿಗಾಗಿ ಶೂನೇಮಿನ ಸ್ತ್ರೀಯ ಪರ್ಯಾಯ ಉತ್ತರದ ಮಾತುಗಳು (2 ಅರಸು 4:28)

ಇದು ಅವಳ ಮನದಲ್ಲಿ ಇತ್ತು ಎಂಬ ಸೂಚನೆಯನ್ನು ಬಿಡುವುದಿಲ್ಲ.

ಇಬ್ರಿಯ ಭಾಷೆಯಲ್ಲಿ ಆ ಸ್ತ್ರೀಯು ತನ್ನ ಗಂಡನಿಗೆ ಒಂದು ಪದದೊಡನೆ ಉತ್ತರ ಕೊಡುತ್ತಾಳೆ ಅದು ಶಾಲೋಮ.[6] ಇದರ ಮೂಲ ಅರ್ಥವು ಸಮಾಧಾನ[7] ಎಂದಾಗಿದ್ದು ಇದು ಕೆಲಸಾರಿ "ಯಾರೊಬ್ಬರಿಗೆ ಒಂದು ಸಂಗತಿಗೆ ನಿರ್ಧಿಷ್ಟವಾದ ಉತ್ತರವನ್ನು ಕೊಡುವುದಕ್ಕೆ ಹಿಂದೇಟು ಹಾಕುವಾಗ ಮತ್ತು ಅದೇ ಸಮಯದಲ್ಲಿ ಆತನನ್ನು ಸಂತೃಪ್ತ ಗೊಳಿಸಬೇಕಾದಾಗ ಇದನ್ನು ಬಳಸಲಾಗುತ್ತದೆ."[8] ನಾನು ಇದರಲ್ಲಿ, ನಾವುಗಳು ಇದಕ್ಕೆ ಸಮಾನವಾದಂತವುಗಳಿಗೆ ಸ್ಪಷ್ಟವಲ್ಲದ "ಇನ್ನೂ ತಿಳಿಯಬೇಡ" ಅಥವಾ "ಅದಕ್ಕಾಗಿ ಚಿಂತಿಸಬೇಡ" ಎಂಬಂತಹ ಪಾರಿಭಾಷಿಕವನ್ನು ಬಳಸುತ್ತೇವೆ. ಆಸ್ಟ್ರೇಲಿಯಾದವರು "ಆಕೆಯು ಸರಿಯಾದ ಸಂಗಾತಿಯನ್ನು ಹೊಂದಿರಬಹುದು" ಎಂಬ ಪಾರಿಭಾಷಿಕವನ್ನು ಬಳಸುತ್ತಾರೆ! (ಇದರ ಅರ್ಥವು, ಸರಿಯಾದ ಸ್ನೇಹಿತನು). ಇದೇ ರೀತಿಯ ಅಭಿವ್ಯಕ್ತಿಗೊಳಿಸುವ ಪದಗಳನ್ನು ಜಗತ್ತಿನಾದ್ಯಂತದ ಜನರು ಬಳಸುತ್ತಾರೆ.

ಆಕೆಯ ಗಂಡನು ಮುಂದಕ್ಕೆ ಯಾಕೆ ವಿಚಾರಿಸಲಿಲ್ಲ ಎಂದು ಕೆಲವರು ಆಶ್ಚರ್ಯಪಡುತ್ತಾರೆ. ಆತನು ಬಹುಶಃ ಸುಗ್ಗಿಯ ಬೆಳೆಯನ್ನು ಬಿಟ್ಟುಬಂದುದ್ದಕ್ಕಾಗಿ ಆತನು ವಿಚಲಿತನಾಗಿರಬಹುದು. ಆತನು ತನ್ನ ಮಗನ ಬಗೆಗೆ ಯಾಕೆ ಕೇಳಲಿಲ್ಲ ಎಂದು ಕೆಲವರು ಆಶ್ಚರ್ಯಪಡುತ್ತಾರೆ. ಆತನು ತನ್ನ ಮಗನು ಆರೋಗ್ಯವಾಗಿಲ್ಲದಿದ್ದರೆ ತನ್ನ ಹೆಂಡತಿಯು ಹೊರಗೆ ಹೋಗುತ್ತಿರಲಿಲ್ಲ ಎಂಬುದರ ಬಗೆಗೆ ಆತನಿಗೆ ಬಹುಶಃ ಖಚಿತತೆ ಇತ್ತು.[9] ಪ್ರತ್ಯಕ್ಷವಾಗಿ ಆತನು ಆಕೆಯ ಮಾತುಗಳಿಂದ ಸಂತೃಪ್ತನಾದನು, ಆಕೆಯ ಭಿನ್ನಹಕ್ಕೆ ಒಪ್ಪಿದನು. ಸುಗ್ಗಿಗಾಗಿ ಸೇವಕ ಮತ್ತು ಕತ್ತೆ ಅವಶ್ಯವಾಗಿದ್ದರು, ಆದರೆ ಆತನು ಅವುಗಳಿಲ್ಲದೆ ಅರ್ಧದಿನದವರೆಗೆ ಆತನು ಕೆಲಸಮಾಡಲು ಸಿದ್ಧನಿದ್ದನು.

ಆ ಸ್ತ್ರೀಯು ಕತ್ತೆಯ ಮೇಲೆ ಕೂತನಂತರ, ಆಕೆಯು ತನ್ನ ಸೇವಕನಿಗೆ, "ಹೊಡೆ, ಓಡಿಸುತ್ತಾ ಬಾ; ನಾನು ಅಪ್ಪಣೆ ಮಾಡುವವರೆಗೂ ನಿಲ್ಲಿಸಬೇಡ" ಎಂದು ಆಜ್ಞಾಪಿಸಿದಳು (ವಚನ 24). "ಹೊಡೆ" ಎಂದರೆ ಕತ್ತೆಯನ್ನು ನಡೆಯಿಸು; ಅದನ್ನು ನೂಕು ಅಥವಾ ಬೆದಕು ಮತ್ತು ಎಷ್ಟು ಸಾಧ್ಯವೋ ಅಷ್ಟು ಜೋರಾಗಿ ಓಡಿಸು" ಎಂದರ್ಥವಾಗಿದೆ. ಅವಳ ಗುರಿಯು ಕರ್ಮೆಲ್ ಬೆಟ್ಟವಾಗಿತ್ತು (ವಚನ 25). ಅವಳು ಹದಿನೈದರಿಂದ ಇಪ್ಪತ್ತು ಮೈಲಿಗಳವರೆಗೆ ಪ್ರಯಾಣಿಸಿದಳು ಮತ್ತು ಆದಷ್ಟು ಬೇಗನೇ ಪ್ರವಾದಿಯನ್ನು ತಲುಪುವ ತವಕವು ಆಕೆಯಲ್ಲಿತ್ತು. ಎಲೀಷನು ಆ ಬೆಟ್ಟದಲ್ಲಿ ಇರುತ್ತಾನೆ ಎಂದು ಆಕೆಗೆ ಹೇಗೆ ತಿಳಿದಿತ್ತೋ ನಾವರಿಯೆವು. ಬಹುಶಃ ಆತನು ಇತ್ತೀಚೆಗೆ ಆಕೆಯ ಮನೆಯಲ್ಲಿ ಇರಲು ಬಂದಾಗ ಆ ಚಿರಪರಿಚಿತ ಲಿಬ್ರೀಟ ಸ್ಥಳದಿಂದಲೇ ಆತನು ಬಂದಿರಬಹುದು.

ಕೆಲವು ತಾಸುಗಳು ಪ್ರಯಾಣದ ನಂತರ, ಆಕೆಯು ಕರ್ಮೆಲ್ ಬೆಟ್ಟಕ್ಕೆ ಬಂದಳು (ವಚನ 25ಎ). ಎಲೀಷನು ದೂರದಿಂದಲೇ ಆಕೆಯನ್ನು ನೋಡಿದನು (ವಚನ 25ಬಿ). ಏನೋ ತಪ್ಪಾದದು ಆಗಿದೆ ಎಂದು ಪ್ರವಾದಿಯು ಅರಿತುಕೊಂಡನು. ಬಹುಶಃ ಆ ಮಾರ್ಗದಲ್ಲಿ ಅವಳು ತನ್ನ ಪ್ರಾಣಿಯನ್ನು ಬಲು ವೇಗದಿಂದ ನಡೆಸಿರಬೇಕು; ಆಕೆಯ ಸ್ಥಾನದಲ್ಲಿ ಇರುವ ಸ್ತ್ರೀಗೆ ಅವಳು ಓಡಿಸುತ್ತಿದ್ದ ವೇಗವು ತಕ್ಕುದಾಗಿರಲಿಲ್ಲ. ತೊಂದರೆಗೆ ಒಳಗಾದವರಂತೆ ಕಾಣುವವರನ್ನು ನಾವು ಭೇಟಿಯಾದಾಗ ಯಾವಾಗಲೂ ನಮ್ಮ ಮೊದಲ ಯೋಚನೆಯೆಂದರೆ ಅವನ ಅಥವಾ ಅವಳ ಕುಟುಂಬದಲ್ಲಿ ಏನೋ ಅವಘಡ ಸಂಭವಿಸಿದೆ ಎಂದು. ಇದನ್ನೇ ಎಲೀಷನೂ ಕೂಡ ಯೋಚಿಸಿದನು. ಆತನು ತನ್ನ ಸೇವಕನಾದ ಗೇಹಜಿಗೆ "ಅಗೋ, ಅಲ್ಲಿ ಶೂನೇಮ್ಯಳು! ನೀನು ಓಡಿಹೋಗಿ ಆಕೆಯನ್ನು ಎದುರುಗೊಂಡು - ನಿನಗೂ ನಿನ್ನ ಗಂಡನಿಗೂ ಮಗನಿಗೂ ಕ್ಷೇಮವೆಂದು ವಿಚಾರಿಸು" ಎಂದು ಹೇಳಿದನು (ವಚನಗಳು 25ಸಿ, 26ಎ).

ಗೇಹಜಿಯು ಆ ಸ್ತ್ರೀಯನ್ನು ಭೇಟಿಯಾದನು, ಆದರೆ ಆತನು ಎಲೀಷನು ಆತನಿಗೆ ಹೇಳಿ ಕಳುಹಿಸಿದ ಪ್ರಶ್ನೆಯನ್ನು ಕೇಳುವಾಗ ಆಕೆಯು ಸರಳವಾಗಿ "ಕ್ಷೇಮ" ಎಂದು ಉತ್ತರಿಸಿದಳು

(ವಚನ 26ಬಿ). ತಿರುಗಿ ಮೂಲ ವೇದಭಾಗದಲ್ಲಿ, ಆಕೆಯು "ಶಾಲೋಮ"[10] ಎಂದು ಹೇಳಿದಳು ಮತ್ತು ತಿರುಗಿ ಹಿಂದುಮುಂದು ಮಾಡುತ್ತಾ ಅಸ್ಪಷ್ಟವಾಗಿ ಉತ್ತರಿಸಿದಳು. ನನ್ನ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಹೇಗಿದ್ದಾನೆಂದು ಕೇಳಿದ್ದಾದರೆ, ಬಲು ಸಾಮಾನ್ಯವಾದ ಉತ್ತರವು "ಚೆನ್ನಾಗಿದ್ದೇನೆ" ಎಂಬುದು. ಇದು "ನಾನು ಬಲು ಚೆನ್ನಾಗಿದ್ದೇನೆ" ಎಂಬುದರಿಂದ "ನಾನು ನಿಜವಾಗಿ ಚೆನ್ನಾಗಿದ್ದೇನೆ, ಆದರೆ ನನಗೆ ಇದರ ಬಗೆಗೆ ಮಾತನಾಡಲು ಮನಸ್ಸಿಲ್ಲ" ಎಂದು ಯಾವುದು ಬೇಕಾದರ ಅರ್ಥವನ್ನು ಕೊಡಬಹುದು. ಆ ಕ್ಷಣದಲ್ಲಿ ಸ್ತ್ರೀಯ ನಂತರದ ಸ್ಥಿತಿಯನ್ನು ವಿಷಾಧಿಕರಿಸಬಹುದಾಗಿದೆ. ಆಕೆಯು ತನ್ನ ನೋವುಗಳನ್ನು ಪ್ರವಾದಿಗಲ್ಲದೆ ಬೇರೆ ಯಾರಿಗೂ ಹೇಳಬಯಸುತ್ತಿರಲಿಲ್ಲ.

**ಭಿನ್ನಹವೋ?**

ಅವಳು ಬೆಟ್ಟದ ಸ್ಥಳವನ್ನು ಮುಟ್ಟಿದ ಮೇಲೆ ಎಲೀಷನನ್ನು ಮುಟ್ಟುವ ತನಕ ಬೆಟ್ಟವನ್ನು ಹತ್ತಿಹೋದಳು. ದುಃಖವನ್ನು ಹತ್ತಿಕ್ಕುತ್ತಾ, ಆಕೆಯು ಆತನ ಮುಂದೆ ಬಿದ್ದುಕೊಂಡು "ಆತನ ಪಾದಗಳನ್ನು ಹಿಡಿದಳು" (ವಚನ 27ಎ). ಕಾಲಿಗೆ ಬೀಳುವುದು ನಮ್ರತೆಯನ್ನೂ ಮತ್ತು ಆತುಕೊಳ್ಳುವಿಕೆಯನ್ನೂ ಸೂಚಿಸುವುದಾಗಿದೆ (ನೋಡಿರಿ ಲೂಕ 5:8; ಮಾರ್ಕ 5:22; 7:25). ಪಾದಗಳನ್ನು ಹಿಡಿಯುವದು ಭಾವನೆಗಳನ್ನು ತಟ್ಟುವ ಆತ್ಮೀಯತೆಯನ್ನು ಸೇರಿಸುವುದಾಗಿದೆ (ನೋಡಿರಿ ಮತ್ತಾಯ 28:9).

ಗೇಹಜಿಯು ಆ ಸ್ತ್ರೀಯಲ್ಲಿ ಶಿಷ್ಟತನದ ಕೊರತೆಯನ್ನು ಕಂಡು ದಂಗಾದನು. ಆತನು "ಆಕೆಯನ್ನು ದೂಡುವುದಕ್ಕಾಗಿ ಹತ್ತಿರ ಬಂದನು" (ವಚನ 27ಬಿ; ಮತ್ತಾಯ 19:13 ರೊಂದಿಗೆ ಹೋಲಿಸಿರಿ). ಎಲೀಷನು ಆತನನ್ನು ತಡೆದು "ಬಿಡು ಆಕೆಯ ಮನಸ್ಸಿನಲ್ಲಿ ಬಹು ದುಃಖವಿರುವ ಹಾಗೆ ತೋರುತ್ತದೆ; ಯೆಹೋವನು ಆಕೆಯ ದುಃಖವನ್ನು ನನಗೆ ಪ್ರಕಟಿಸಲಿಲ್ಲ ಮರೆಮಾಡಿದ್ದಾನೆ" ಎಂದ ಹೇಳಿದನು (2 ಅರಸು 4:27ಬಿ). ಆ ಸ್ತ್ರೀಗೆ ಯಾವುದೋ ದುರಂತ ನಿಶ್ಚಿತವಾಗಿ ಸಂಭವಿಸಿದೆ, ಆದರೆ ಎಲೀಷನು ಇದನ್ನು ತಿಳಿದಿಲ್ಲ. ಪ್ರೇರಣೆಯಿಂದ ಮಾತನಾಡುವವರು ದಿನದ ಇಪ್ಪತ್ನಾಲ್ಕು ಗಂಟೆಗಳವರೆಗೂ ಆತನ (ಕರ್ತನ) ಅದ್ವಿತೀಯ ಶಕ್ತಿಯಿಂದ ನಡೆಸಲ್ಪಟ್ಟವರು ಆಗಿರುವುದಿಲ್ಲ.

ಕೊನೆಗೂ ಆ ಸ್ತ್ರೀಯು ಮಾತಾನಾಡಿದಳು, ತನ್ನ ದುಃಖಕ್ಕೆ ದಾರಿಮಾಡಿಕೊಟ್ಟಳು. ತನ್ನ ಹೃದಯದ ನೋವನ್ನು ಆತನ ಮುಂದೆ ತೋಡಿಕೊಂಡಳು: "ನನಗೆ ಮಗನು ಬೇಕೆಂದು ಸ್ವಾಮಿಯಾದ ನಿನ್ನನ್ನು ಬೇಡಿಕೊಂಡೆನೋ? ನನ್ನನ್ನು ವಂಚಿಸಬಾರದೆಂದು ಮೊರೆಯಿಟ್ಟೆನಲ್ಲಾ" (ವಚನ 28; ನೋಡಿರಿ ವಚನ 16). ಆಕೆಯ ಅಮೂಲ್ಯವಾದ ಮಗನು ಅನಪೇಕ್ಷಿತವಾದನು ಮತ್ತು ಅನಿರೀಕ್ಷಿತವಾದವನು; ಈಗ ಆತನು ಇಲ್ಲವಾಗಿದ್ದಾನೆ! ಅವಳಿಗೆ ಆತನ ವಾಕ್ಯದ ವಿಶೇಷ ಕೃಪೆ ಮತ್ತು ವಿಶ್ವಾಸತನಕ್ಕೆ ಪ್ರಾಯೋಗಿಕವಾಗಿ ವಿಶೇಷವಾಗಿ ಕೊಡಲ್ಪಟ್ಟಂತಹ ಆತನನ್ನು ದೇವರು ಯಾಕೆ ಆಕೆಯಿಂದ ತೆಗೆದುಕೊಂಡನು ಎಂಬ ಪ್ರಶ್ನೆಯೊಂದಿಗೆ "ಹೋರಾಡುತ್ತಿದ್ದಳು."[11] "ಇದು ಯಾಕೆ ಸಂಭವಿಸಿತೆಂದು ನಾನು ಅರಿಯೆನು" ಎಂದು ಅವಳು ಹೇಳುತ್ತಿದ್ದಳು. ಎಲೀಷನು ಆಕೆಯ ಮಾತುಗಳಿಂದ ಅವಮಾನ ಹೊಂದಿದೆನೆಂದು ಭಾವಿಸಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ. ದುಃಖದಿಂದ ತುಂಬಿದವರು ಯಾವಾಗಲೂ ವಿಪರೀತರೂ ಮತ್ತು ತರ್ಕ ಬಾಹಿರರೂ ಆಗಿದ್ದು ಸಿಟ್ಟಿಗೇಳುವವರೂ ಆಗಿರುತ್ತಾರೆ (ನೋಡಿರಿ 1 ಅರಸು 17:18), ಮತ್ತು ಆತನು ಸ್ಪಷ್ಟವಾಗಿ ಆದನ್ನು ತಿಳಿದುಕೊಂಡನು.

ಆ ಸ್ತ್ರೀಯ ಮಾತಿನಿಂದ ಆಕೆಯ ಮಗನಿಗೆ ಯಾವುದೇ ಭಯಂಕರವಾದದ್ದು ಸಂಭವಿಸಿದೆ ಎಂದು ನಿಶ್ಚಿತವಾಗಿತ್ತು, ಆದರೆ ಸಮಸ್ಯೆಯೇನು ಎಂಬುದು ಸ್ಪಷ್ಟವಾಗಿರಲಿಲ್ಲ. ಎಲೀಷನು ಆಕೆಯ ಮಗನು ಸತ್ತಿದ್ದಾನೆ ಎಂಬುದನ್ನು ತಿಳಿದುಕೊಂಡನೇ, ಅಥವಾ ಆತನು

ಅಸ್ವಸ್ಥನಾಗಿರಬಹುದು ಅಥವಾ ಗಾಯಗೊಂಡಿರಬಹುದೇ ಎಂದು ಯೋಚಿಸಿದನೇ? ಆ ಸ್ತ್ರೀಯು ಸೇರಿಸಿದಂತಹ ಹೆಚ್ಚಿನ ವಿವರಗಳು ಇಲ್ಲಿ ದಾಖಲಾಗಿಲ್ಲವೋ?[12] ಕರ್ತನು ಪ್ರವಾದಿಗೆ ಇನ್ನೊಂದು ದಿವ್ಯದೃಷ್ಟಿಯನ್ನು ಕೊಟ್ಟಿದ್ದನೇ? ಈ ಪ್ರಶ್ನೆಗಳಿಗೆ ನಿಶ್ಚಿತವಾಗಿ ಉತ್ತರಿಸಲು ನಮಗೆ ಆಗದು.

ಆ ಹುಡುಗನಲ್ಲಿ ಯಾವುದೇ ದೋಷವಿರಲಿ, ಏನನ್ನಾದರೂ ಒಂದೇ ಸಾರಿ ಮಾಡುವದು ಅಲ್ಲಿ ಅವಶ್ಯವಿತ್ತು. ಎಲೀಷನು ಗೇಹಜಿಗೆ - "ನೀನು ನಡು ಕಟ್ಟಿಕೊಂಡು ... ದಾರಿಯಲ್ಲಿ ... ಹೋಗು" ಎಂದು ಹೇಳಿದನು (2 ಅರಸು 4:29ಎ). "ನಡುವನ್ನು ಕಟ್ಟಿಕೊಂಡು" ಎಂಬುದರ ಅರ್ಥವು "ನಿನ್ನ ನಿಲುವಂಗಿಯ ಅಂಚನ್ನು ನಿನ್ನ ನಡುವಿನ ಪಟ್ಟಿಗೆ ಮಡಚಿಕೋ [NIV ಯನ್ನು ನೋಡಿರಿ] ಹಾಗಾದರೆ ನಿನಗೆ ನಿನ್ನ ಕಾಲುಗಳ ನ್ನು ಮುಂದಕ್ಕೆ ಚಾಚಲು ಮತ್ತು ಓಡಲು ಆಗುತ್ತದೆ" (1 ಅರಸು 18:46ರ ಜೊತೆ ಹೋಲಿಸಿರಿ) ಎಂದು ಅರ್ಥಕೊಡುವುದಾಗಿದೆ. ಎಲೀಷನು ಮುಂದುವರೆಸುತ್ತಾ "ಹೋಗುವಾಗ ದಾರಿಯಲ್ಲಿ ಯಾರನ್ನೂ ವಂದಿಸಬೇಡ; ಅವರ ವಂದನೆಯನ್ನೂ ಸ್ವಿಕರಿಸಬೇಡ" ಎಂದು ಹೇಳಿದನು (2 ಅರಸು 4:29; ಲೂಕ 10:4ರ ಜೊತೆ ಹೋಲಿಸಿರಿ). ಶುಭಾಶಯದ ಸಂಸ್ಕಾರಗಳು ಸದಾ ಸಮಯವನ್ನು ಭಕ್ಷಿಸುವಂತವುಗ ಳಾಗಿರುತ್ತವೆ. ಪ್ರವಾದಿಯು ತನ್ನ ಸೇವಕರಿಗೆ ಎಷ್ಟು ಸಾಧ್ಯವೋ ಅಷ್ಟು ಬೇಗ ಆ ಸ್ತ್ರೀಯ ಮನೆಯ ಕಡೆಗೆ ತಲೆ ಹಾಕಬೇಕು ಮತ್ತು *ಯಾವುದೂ* ಆತನನ್ನು ನಿಧಾನಿಸಬಾರದು ಎಂದು ಹೇಳುತ್ತಾನೆ.

ಎಲೀಷನು ಗೇಹೆಜಿಗೆ ತನ್ನ ಕೋಲನ್ನು ಕೊಟ್ಟನು (ವಚನ 29ಎ) ಮತ್ತು ಆತನಿಗೆ ಆ ತಾಯಿಯ ಆ ಮನೆಯನ್ನು ತಲುಪಿದೊಡನೆ ಆತನು ಆ ಕೋಲನ್ನು "ಆ ಕೂಸಿನ ಮುಖದ ಮೇಲೆ" ಇಟ್ಟನು (ವಚನ 29ಸಿ). ಎಲೀಷ ಅಧಿಕಾರ ಚಿನ್ಹೆಯು ಕಂಬಳಿ ಆಗಿತ್ತು; ಎಲೀಷನ ಕೋಲನ್ನು ಹೊಂದಿದ್ದನು (ವಿಮೋಚಕಾಂಡ 4:1-4; 14:16: 17:5, 6, 8-13 ರೊಡನೆ ಹೋಲಿಸಿರಿ). ಎಲೀಷನು ಗೆಹೆಜೆಗೆ ಈ ಎಲ್ಲಾ ಸೂಚನೆಗಳನ್ನು ಏಕೆ ಕೊಟ್ಟನು? ಎಲೀಷ ಉದ್ದೇಶವು ಅಂಥವುಗಳು ಕೆಲಸವನ್ನು ಮಾಡವು ಎಂದು ತನ್ನ ಸೇವಕನಿಗೂ ಮತ್ತು ಆ ಸ್ತ್ರೀಗೂ ಪಾಠ ಕಲಿಸಬೇಕೆಂದೇ ಆಗಿತ್ತು ಎಂದು ಕೆಲವರು ಒಪ್ಪಿಸು ನೋಡುತ್ತಾರೆ.[13] ಒಂದು ವೇಳೆ ಹಾಗಿದ್ದಾದರೆ ದೈವಪ್ರೇರಿತವಾದ ದಾಖಲೆಗಳು ಸ್ತ್ರೀಯು ಹೇಳಿದ ಎಲ್ಲವುಗಳನ್ನು ಕೊಡುತ್ತದೆ ಎಂದು ನಾವು ಭಾವಿಸುತ್ತೇವೆ, ಮತ್ತು ಕರ್ತನು ಇನ್ನೂ ಸಮಸ್ಯೆಯ ಸ್ವಭಾವದ ಸಾರಾಂಶ ವನ್ನು ಎಲೀಷನಿಂದ ಮುಚ್ಚಿಡುತ್ತಾ ಇದ್ದಾನೆ (2 ಅರಸು 4:27), ಇದು ಬಹುವಾಗಿ ಕೋಲು ಇರುವಿಕೆಯು ಹುಡುಗನಿಗೆ ಆತನಿಗೆ ಏನು ದೋಷವಾಗಿದೆಯೋ ಅದಕ್ಕಾಗಿ ಸಹಾಯ ಮಾಡುವುದೆಂದು ಪ್ರವಾದಿಯು ಯೋಚಿಸುವವನಾಗಿದ್ದನು.[14] ಹೀಗಿರುವಲ್ಲಿ, ಆತನು ಗೆಹೆಜಿಯನ್ನು ಕೋಲಿನೊಂದಿಗೆ ಮುಂದಕ್ಕೆ ಕಳುಹಿ, ಇದನು ಯಾಕೆಂದರೆ ಆ ಸೇವಕನು ತರುಣನೂ ಮತ್ತೂ ವೇಗಿಯೂ ಆಗಿದ್ದನು.

ತಾಯಿಗೆ ಎಲೀಷನ ಮಾತುಗಳಿಂದ ಅವನು ತಾನೇ ಅವಳ ಮನೆಗೆ ಹೋಗಲಾರನು ಎಂಬ ಸೂಚನೆಯು ದೊರೆಯಿತು. ಆಕೆಯು ತನ್ನ ಹೊಳೆಯುತ್ತಿರುವ ಕಣ್ಣುಗಳೊಂದಿಗೆ ಹೀಗೆ ಹೇಳಿದಳು "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟು ಹೋಗುವುದಿಲ್ಲ" (ವಚನ 30ಎ; 2 ಅರಸು 2:2, 4, 6 ರೊಂದಿಗೆ ಹೋಲಿಸಿರಿ)? ಇನ್ನೊಂದು ಮಾತಿನಲ್ಲಿ "ನಿನ್ನನ್ನು ಬಿಟ್ಟು ನಾನು ಹೋಗಲಾರೆನು!" ಏನೇ ಆಗಲಿ ಪ್ರವಾದಿಯು ಶೂನೇಮ್ಯಕ್ಕೆ ಹೋಗಲೇ ಬೇಕು ಎಂಬುದನ್ನು ಇದು ಸೂಚಿಸುವಂತಿತ್ತು, ಆದರೆ ಆತನು ಹೋಗು ವವನಿದ್ದನೂ ಅಥವಾ ಇಲ್ಲವೋ, ಈಗ ಆತನು "ಆಕೆಯ ಜೊತೆಯಲ್ಲಿ ಹೋದನು" (ವಚನ 30ಬಿ). ತಿರುಗಿ, ಆ ಸ್ತ್ರೀಯು ಕತ್ತೆಯನ್ನು ಹತ್ತಿದಳು ಆಕೆಯ ಸೇವಕನು ಪ್ರಾಣಿಯ ಜೊತೆಯಿದ್ದನು: ಪ್ರವಾದಿಯು ನಾಗಾಲೋಟದೊಂದಿಗೆ ಬೇಗನೇ ಮುಟ್ಟಲು ಪ್ರಯತ್ನಿಸುತ್ತಾ ಅವರ ಹಿಂದೆ ಬರುತ್ತಿದ್ದನು.

ಅದೇ ಸಮಯದಲ್ಲಿ, ಗೆಹೆಜಿಯು ಆ ಸ್ತ್ರೀಯ ಮನೆಯನ್ನು ತಲುಪಿದನು, ಪ್ರವಾದಿಯ ಕೋಣೆಯ ಮೆಟ್ಟಿಲುಗಳನ್ನು ಓಡುತ್ತಾ ಹತ್ತಿದನು, ಮತ್ತು "ಕೋಲನ್ನು ಹುಡುಗನ ಮುಖದ ಮೇಲೆ ಇಟ್ಟನು" (ವಚನ 31ಎ). ಆತನು ಬಹುಶಃ ತನಗೆ ಈ ಜವಾಬ್ದಾರಿಯು ಕೊಡಲಪಟ್ಟಿರುವುದಕ್ಕಾಗಿ ಪುಳುಕಿತನಾಗಿರಬಹುದು. "ಮುಖದ ಮೇಲಿಟ್ಟರೂ ಶಬ್ಧವಿಲ್ಲ, ಜೀವದ ಲಕ್ಷಣವಿಲ್ಲ" (ವಚನ 31ಬಿ) ಎಂಬುದು ಆತನನ್ನು ಎಷ್ಟು ನಿರಾಶನನ್ನಾಗಿಸಿರಬಹುದಲ್ಲವೇ. "ಜೀವವಿರುವ ಯಾವ ಚಿನ್ಹೆಯೂ ಇಲ್ಲ" (NEB) ಆತನು ಎಲೀಷ ಮತ್ತು ಆ ಸ್ತ್ರೀಯನ್ನು ಭೇಟಿಯಾಗುವ ತನಕ ಮತ್ತೇ ನೋಡುತ್ತಾ ನಿಂತನು. ಆತನು ತನ್ನ ತಲೆಯನ್ನಾಡಿಸುತ್ತಾ ತನ್ನ ಒಡೆಯನಿಗೆ "ಹುಡುಗನು ಎಚ್ಚರವಾಗಲಿಲ್ಲ" (ವಚನ 31ಸಿ) ಎಂದು ಹೇಳುತ್ತಿರುವುದನ್ನು ನಾನು ಊಹಿಸಬಲ್ಲೆ. ಆ ಸ್ತ್ರೀಯು ತನ್ನ "ಕೋಲಿನ ಪರಿಹಾರವು ಇಲ್ಲಿ ನಡೆಯದು! ಅಂತೆಯೇ ನಾನು ಎಲೀಷನನ್ನು ಬರಲು ಸೂಚಿಸಿದ್ದು" ಎಂದು ಯೋಚಿಸಿರಬಹುದು!

## ಪರೀಕ್ಷೆ ಮತ್ತು ವಿಜಯ (4:32-37)

**ಪರೀಕ್ಷೆ**

ಸ್ತ್ರೀಯು ಮತ್ತು ಆ ಜನರು ತಮ್ಮ ಪ್ರಯಾಣವನ್ನು ಪುನಃ ಪ್ರಾರಂಭಿಸಿದರು. ಕೊನೆಗೆ ಅವರು ಮನೆಯನ್ನು ತಲುಪಿದರು. ಆ ಹುಡುಗನು ಮಧ್ಯಾಹ್ನವೇ ಸತ್ತಿದ್ದನು (ವಚನ 20), ನಂತರವೇ ಆ ತಾಯಿಯು ಅಲ್ಲಿಂದ ಕರ್ಮೆಲ್ ಬೆಟ್ಟಕ್ಕೆ, ಅಲ್ಲಿಂದ ಮನೆಗೆ ಪ್ರಯಾಣವನ್ನು ಮಾಡಿದ್ದಳು. ಹೀಗೆ ಅದು ತಡವಾದ ದಿನವಾಗಿತ್ತು. ಸಾಮಾನ್ಯವಾಗಿ ಅಂಥ ಪ್ರಯಾಣದ ನಂತರ, ಎಲೀಷನು ತನ್ನ ಕೋಣೆಗೆ ವಿಶ್ರಾಂತಿಗಾಗಿ ಹೋಗುತ್ತಿದ್ದನು. ಈ ಸಾರಿ ಅಲ್ಲಿ ವಿಶ್ರಾಂತಿಗಾಗಿ ಸಮಯವಿರಲಿಲ್ಲ. ಪ್ರವಾದಿಯು ತನ್ನ ಕೋಣೆಯನ್ನು ತಲುಪಿದಾಗ ಆತನು ಬಾಗಿಲಿನ ಕಡೆಗೆ ನೋಡಿದನು, "ಸತ್ತ ಹುಡುಗನನ್ನು ಮಂಚದ ಮೇಲೆ ಇಟ್ಟಿರುವುದನ್ನು ಕಂಡನು" (ವಚನ 32). ಎಲೀಷನು ಸಮಸ್ಯೆಯ ಗಂಭೀರತೆಯ ಬಗೆಗೆ ಸಂಪೂರ್ಣವಾಗಿ ಎಚ್ಚರವುಳ್ಳನಾಗಿದ್ದು ಇದೇ ಮೊದಲ ಸಾರಿ ಇರಬಹುದು. ಅಮೂಲ್ಯವಾದ ಹುಡುಗನು ತನ್ನ ಮಂಚದ ಮೇಲೆ ಮುಗ್ಧವಾಗಿ ನಿದ್ರೆಯಲ್ಲಿ ಇದ್ದಂತೆ ಬಿದ್ದುಕೊಂಡಿರುವದನ್ನು ನೋಡಿದಾಗ ಆತನ ಹೃದಯವು ಒಡೆದು ಹೋಯಿತು.

ಎಲೀಷನು ಕೋಣೆಯ ಒಳಗೆ ಹೋದನು ಮತ್ತು ಬಾಗಿಲು ಮುಚ್ಚಿಕೊಂಡನು (ವಚನ 33ಎ; ವಚನ 4 ರೊಂದಿಗೆ ಹೋಲಿಸಿರಿ) ತಾಯಿ ಮತ್ತು ಗೇಹಜಿಯನ್ನು ಹೊರಗೆ ಹಾಕಿದನು (1 ಅರಸು 17:19, 23 ರೊಂದಿಗೆ ಹೋಲಿಸಿರಿ). ಆತನು ಆ ಹುಡುಗನೊಂದಿಗೆ ಒಬ್ಬಂಟಿಗನಾಗಿರುವಾಗ, "ಯೆಹೋವನಿಗೆ ಪ್ರಾರ್ಥಿಸಿದನು" (2 ಅರಸು 4:33ಬಿ). ಆತನು ಬಹುಶಃ ಆ ತಾಯಿಯು ಕರ್ಮೆಲ್ ಬೆಟ್ಟದಲ್ಲಿ ಬೇಟಿ ಯಾದಾಗಿನಿಂದಲೂ ಪ್ರಾರ್ಥಿಸುತ್ತಿರಬಹುದು, ಆದರೆ ಈ ಸ್ಥಿತಿಯನ್ನು ನೋಡಿದ ಮೇಲೆ, ಆತನ ಪ್ರಾರ್ಥನೆಯು ಬಹು ತವಕದ ಮತ್ತು ಕೇಂದ್ರಿಕೃತವಾದ ಪ್ರಾರ್ಥನೆಯಾಗಿತ್ತು.

ಆತನು "ಆನಂತರ ಆ ಹುಡುಗನ ಮೇಲೆ ಬೋರ್ಲುಬಿದ್ದು ತನ್ನ ಬಾಯಿ ಕಣ್ಣು ಕೈಗಳನ್ನು ಅವನ ಬಾಯಿ ಕಣ್ಣು ಕೈಗಳಿಗೆ ಮುಟ್ಟಿಸಿದ್ದರಿಂದ ಹುಡುಗನ ದೇಹವು ಬೆಚ್ಚಗಾಯಿತು" (ವಚನ 34). ಈ ವಿಚಿತ್ರವಾದ ಆಚರಣೆಯನ್ನು ಎಲೀಷನು ಯಾಕೆ ನಡಿಸಿದನು? ಬಹಶಃ ಆತನ ಗುರುವು ಹುಡುಗನನ್ನು ಎಬ್ಬಿಸಿದ್ದು ಇದೇ ರೀತಿಯಲ್ಲಿರಬಹುದು (ನೋಡಿರಿ 1 ಅರಸು 17:21, 22). ಎಲೀಯನ ಮೇಲಿನ ಪಾಠದಲ್ಲಿ ಪ್ರವಾದಿಯು ಚಾರಪ್ತಾದ ವಿಧವೆಯ ಮಗನನ್ನು ಎಬ್ಬಿಸಿದಕ್ಕೆ ಸಂಬಂಧಿಸಿದವುಗಳು ಈ ಕೆಳಗಿನಂತಿವೆ:

> ಇದು ಮುಂಚೆ ಸಂಭವಿಸದ್ದು ಎಂಬುದನ್ನು ನೆನಪಿಡಿರಿ ... ಅನೇಕ ಸಾವಿರಾರು ಜನರು ಎಲೀಯನ ದಿನಗಳವರೆಗೂ ವಿಶ್ರಾಂತಿಗಾಗಿ ಮಲಗಿದ್ದರು; ಯಾವನೊಬ್ಬನೂ ಜೀವಿತಕ್ಕೆ ಮರಳಲಿಲ್ಲ ... ಎಲೀಯನು ಅಸಾಧ್ಯವಾದದ್ದನ್ನು ಪ್ರಯತ್ನಿಸಿದ್ದನು. ಆತನು ನಿದರ್ಶನವಲ್ಲದ್ದನ್ನು ಹೊಂದಿದ್ದನು, ಯಾವದೇ ಹಿಂದಿನ ಕೈಪಿಡಿಯೂ ಇರಲಿಲ್ಲ.
>
> ಎಲೀಯನು ಸತ್ತವರೊಳಗಿಂದ ಹೇಗೆ ಎಬ್ಬಿಸಬೇಕು ಎಂಬ ಕೈಪಿಡಿಯನ್ನು ಹೊಂದಿಲ್ಲದಿದ್ದಲಿಂದ ಬಹುಶಃ "ನೀನು ಏನು ಮಾಡಬಲ್ಲೆ ಅದನ್ನು ಮಾಡು" ಎಂಬ ಶೀರ್ಷಿಕೆಯ ಅಡಿಯಲ್ಲಿ ಆತನು ಕೆಲಸಮಾಡಿರಬಹುದು. ಆತನಿಗೆ ತನ್ನ ದೇಹದ ಬಿಸಿಯನ್ನು ಆತನೊಡನೆ ಹಂಚಿಕೊಳ್ಳುವದು ಆತನಿಗೆ ಯೋಗ್ಯವಾಗಿ ಕಂಡಿತು ಮುಂದೆ ಆ ಹುಡುಗನು ಉಜ್ಜೀವಿಸಿದ ನಂತರ, ಆ ಪರಿಣಾಮದಿಂದ ಆತನು ಪ್ರಭಾವಿತನಾಗಿರಬಹುದು, ಎಷ್ಟು ಪ್ರಭಾವಿತನಾಗಿದ್ದನೆಂದರೆ ಅದರ ಬಗೆಗೆ ಎಲೀಷನಿಗೆ ಹೇಳಿದನು. ಮತ್ತು ಅದೇ ತರದ ಸಂಗತಿಯನ್ನು ಎಲೀಷನು ನಂತರದಲ್ಲಿ ಮಾಡಿದನು (2 ಅರಸು 4). ಅದಕ್ಕಾಗಿಯೇ ಇದು ಮಾಡಲ್ಪಟ್ಟಿತೇ?: ಬಹುಶಃ ಇಲ್ಲ ...[15]

ನಮ್ಮ ಪ್ರಸ್ತುತ ಕಥೆಯು ಮುಂದುವರೆಯುತ್ತಿದ್ದಂತೆಯೇ, ಎಲೀಷನು *ದೇವರಿಗೆ ಪ್ರಾರ್ಥಿಸಿದ* ವಾಸ್ತವತೆಯನ್ನು ಬಿಟ್ಟು ಬಿಡಬೇಡಿರಿ (2 ಅರಸು 4:33). ಎಲೀಷನು ನದಿಯ ನೀರನ್ನು ಎರಡು ಭಾಗಮಾಡುವುದಕ್ಕಾಗಿ ಕುರಿಚರ್ಮದಿಂದ (ಕಂಬಳಿಯಿಂದ) ಹೊಡೆದದ್ದನ್ನು (2:14), ಅಥವಾ ಕೆಟ್ಟ ನೀರನ್ನು ಶುದ್ಧಮಾಡಲು ನೀರಿನಲ್ಲಿ ಉಪ್ಪನ್ನು ಒಗೆದದ್ದು (2:21) ಇದಕ್ಕಿಂತಲೂ ತನ್ನನ್ನು ತಾನು ಮಗುವಿನ ಮೇಲೆ ಬೋರ್ಲುಬೀಳವುದನ್ನು ಬಿಟ್ಟರೆ ಮಗುವನ್ನು ಉಜ್ಜೀವಿಸಲು ಬೇರೇನನ್ನೂ ಆತನಿಂದ ಮಾಡಲಾಗಲಿಲ್ಲ. ಶಕ್ತಿಯು ಒಂದು ಆಚರಣೆ ಆಗಿರಲಿಲ್ಲ ಆದರೆ ಸಂಬಂಧವು ಆಗಿತ್ತು; ದೇವರೊಡನೆ ಎಲೀಷನ ಸಬಂಧವೇ ಅದು ಆಗಿತ್ತು. ಆ ಶಕ್ತಿಯು ಆತನ ದೇವರಿಂದ ಬಂದಿತ್ತು.

**ವಿಜಯ**

ಆನಂತರ ಎಲೀಷನು ಹುಡುಗನ ಮೇಲೆ ಬೋರ್ಲುಬಿದ್ದು ತನ್ನ ಬಾಯಿ ಕಣ್ಣು ಕೈಗಳನ್ನು ಅವನ ಬಾಯಿ ಕಣ್ಣು ಕೈಗಳಿಗೆ ಮುಟ್ಟಿಸಿದ್ದರಿಂದ ಹುಡುಗನ ದೇಹವು "ಬಿಸಿಯಾಯಿತು" (ವಚನ 34), ಆದರೆ ಅಲ್ಲಿ ಇನ್ನೂ ಜೀವಿತದ ಯಾವ ಸೂಚನೆಯೂ ಇರಲಿಲ್ಲ. ಪ್ರವಾದಿಯು ಹಾಸಿಗೆಯಿಂದ ಎದ್ದು ತಿರುಗಿ ಅತ್ತಿತ್ತ ಅಡ್ಡಾಡಿದನು (ವಚನ 35ಎ). ಬಹುಶಃ ಮುಂದೇನು ಮಾಡಬೇಕು ಎಂದು ಗಲಿಬಿಲಿ ಉಳ್ಳವನಾಗಿರಬಹುದು. ಆತನ ಪ್ರಾರ್ಥನೆಗಳು ಬಹು ಭಾವೋದ್ರೇಕದಿಂದ ಕೂಡಿರಬಹುದು. ಕೊನೆಯಲ್ಲಿ ಆತನು ಎಲೀಯನ ರೀತಿಯನ್ನೇ ಇನ್ನೊಂದು ಸಾರಿ ಮಾಡೋಣ ಎಂದು ನಿರ್ಧರಿಸಿದನು. ತಿರುಗಿ ಅವನ ಮೇಲೆಬೋರ್ಲು ಬಿದ್ದನು (ವಚನ 35ಬಿ). ಈ ಸಾರಿ ಆ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕಿತ್ತು. "ಹುಡುಗನು ಏಳು ಸಾರಿ ಸೀತು ಕಣ್ಣು ತೆರೆದನು" (ವಚನ 35ಸಿ).

ಲೇಖಕರು ಈ ಏಳು ಸೀನುಗಳಿಗೆ ವಿಶೇಷ ಅರ್ಥವನ್ನು ಕಂಡು ಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.[16] ಕೆಲ ಹಿಂದಿನ ವಿಮರ್ಷಕರು ಸೀನುಗಳಿಂದ ಹೊರಹೊಮ್ಮಿದ ವಿಷಕಾರಿ ಅಂಶಗಳು ಬಗೆಗೆ ಮಾತನಾಡುತ್ತಾರೆ ಆದರೆ ಈ ವಿಷಕಾರಕವಾದ ಅಂಶಗಳು ಒಳಗೊಂಡಿರುವಂತಹ ಯಾವುದೇ ಮಾರಕವಾದ ರೋಗಗಳ ಚರ್ಚೆಯಾದ ಸಾಧ್ಯತೆಗಳು ಇಲ್ಲಿ ಇಲ್ಲ. ಒಂದು ವೇಳೆ ಔಷದೀಯ ವಿವರಗಳ ಅವಶ್ಯಕತೆಯ ಇದ್ದರೆ ಗಮನಿಸಿ, ಆ ಹುಡುಗನು ಸುಗ್ಗಿಯ ಕಣದಲ್ಲಿನ ಧೂಳಿನಲ್ಲಿ ಆ ಅಸ್ವಸ್ಥತೆಯನ್ನು ಪಡೆದಿರಬಹದು.[17] ಇತರರು ಈ ಏಳು ಸಂಖ್ಯೆಯು ಯೆಹೂದಿಗಳ ಪವಿತ್ರ ಸಂಖ್ಯೆಯಾಗಿತ್ತು ಎಂದು ಸಂಕೇತಾರ್ಥವಾಗಿ ನೋಡುತ್ತಾರೆ. "ಏನೇ ಆಗಲಿ" ಅವರು ಹೇಳುವುದೇನೆಂದರೆ, "ಜನರು ಸಾಮಾನ್ಯವಾಗಿ ಎರಡು ಬಾರಿ ಸೀನುತ್ತಾರೆ" ಎಂದು. ಅದರಲ್ಲಿನ ಅಡಗಿಸಲ್ಪಟ್ಟ ಅರ್ಥವನ್ನು ನಾವು ನೋಡ

ಬೇಕೆಂದು ವೇದಭಾಗವು ಎಲ್ಲಿಯ ಸೂಚಿಸಿಲ್ಲ. ಏಳು ಸಾರಿ ಸೀನುವದು ಪ್ರಾಸಂಗಿಕವಾದ ವಿವರದ ವಿಧವು ಒಬ್ಬ ಪ್ರತ್ಯಕ್ಷ ಸಾಕ್ಷಿಯೊಂದಿಗೆ ಮರು ಎಣಿಕೆಯು ಆಯಿತು. ಪ್ರತ್ಯಕ್ಷವಾಗಿ ಎಲೀಷನು ಗೇಹಜಿಗೆ ಏನಾಯಿತೆಂದು ಕೇಳಿದನು ಮತ್ತು ಸೇವಕನು ಇತರರಿಗೆ ಹೇಳಲು ತಿರುಗಿಕೊಂಡನು (ನೋಡಿರಿ 8:4, 5).

ವೇದ ಭಾಗವು ಆ ಹುಡುಗನು ಸೀನಿದ್ದರ ಬಗೆಗೆ ಯಾಕೆ ಮಾತನಾಡುತ್ತಿದೆ ಎಂಬುದರ ಸರಳವಾದ ವಿವರಣೆಯು ಇಲ್ಲಿ ಇದೆ; ಅದು ಆತನು ತಿರುಗಿ ಉಸಿರಾಡುತ್ತಿದ್ದಾನೆ ಎಂಬುದಕ್ಕೆ ಪುರಾವೆಯು ಆಗಿತ್ತು! ಆತನು ಕೇವಲ ಸೀನುವುದನ್ನು ಮಾತ್ರ ಮಾಡಲಿಲ್ಲ, ಆತನು ತನ್ನ ಕಣ್ಣುಗಳನ್ನು ತೆರದನು! ದೇವರ ಶಕ್ತಿಯ ಮೂಲಕ ಜೀವವು ಆತನ ದೇಹಕ್ಕೆ ಮರಳಿ ಬಂದಿತು! ಎಲೀಷನು "ಸತ್ತ ಹುಡುಗನಿಗೆ ಜೀವದಾನಮಾಡಿದನು" (8:5)! ಆ ಹುಡುಗನು ತನ್ನ ಸ್ನೇಹಿತರು, ಪ್ರವಾದಿಯ ಕಡೆಗೆ ನೋಡಿದಾಗ ಮುಗುಳ್ನಕ್ಕನು ಎಲೀಷನೂ ಕೂಡಾ ತಿರುಗಿ ನಕ್ಕನು ಎಂಬುದನ್ನು ನಾನು ನೋಡಬಲ್ಲೆ.

ಅಗತ್ಯ ಬಿದ್ದರೆ ಕರೆ ಬರುವುದೆಂದು ಗೇಹಜಿಯು ಸ್ಪಷ್ಟವಾಗಿ ಮುಚ್ಚಿದ ಬಾಗಿಲಿನಿಂದ ಹೊರಗೆ ಇದ್ದನು. ಈಗ ಎಲೀಷನು ಆತನನ್ನು ಕರೆದನು ಎಂದು ಹೇಳಿದನು (ವಚನ 4:36). ತಾಯಿಯು ಮೆಟ್ಟಿಲಿನಿಂದ ಮೇಲೆ ಬರುತ್ತಿದ್ದಂತೆಯೇ ಏನನ್ನು ಎದುರು ನೋಡ ಬೇಕೆಂದು ಬಹುಶಃ ಅವಳಿಗೆ ತಿಳಿದಿರಲಿಲ್ಲ. ಎಲೀಷನು ಎಲೀಯನ ಅದ್ಭುತವನ್ನು ನಕಲು ಮಾಡುತ್ತಾನೆ ಎಂದು ನಿರೀಕ್ಷಿಸಿದ್ದಳು, ಆದರೆ ತಿರುಗೊಂದಾವರ್ತಿ ನಿರಾಶೆಗೊಳಗಾಗುವುದರ ಬಗೆಗೆ ಅವಳೂ ಭಯಪಟ್ಟಿರಬಹುದು. ಅವಳು ಬಾಗಿಲಿನಿಂದ ಒಳಗೆ ಬಂದಳು ಮತ್ತು ಎಲೀಷ ಹಾಸಿಗೆಯ ಮೇಲಿನ ಅವಳ ಮಗುವನ್ನು ತೋರಿಸಿದನು - ಜೀವಂತ ಮಗುವನ್ನು ತೋರಿಸಿದನು. "ನಿನ್ನ ಮಗನನ್ನು ತೆಗೆದುಕೋ" (ವಚನ 36ಬಿ) ಎಂದು ಹೇಳಿದಾಗ ಅವಳ ಸಂತೋಷವನ್ನು ಊಹಿಸಿಕೊಳ್ಳಿರಿ.

ತಾಯಿಯು ಹಾಸಿಗೆಯೆಡೆಗೆ ಧಾವಿಸುವುದನ್ನು ನಾವು ಎದುರುನೋಡಬಹುದು. ಬದಲಾಗಿ ಆಕೆಯು ಪ್ರವಾದಿಯ ಹತ್ತಿರ ಬಂದು ಅವನ ಪಾದಗಳಿಗೆ ಬಿದ್ದು ಸಾಷ್ಟಾಂಗ ನಮಸ್ಕಾರ ಮಾಡಿದಳು (ವಚನ 37ಎ). ನಂತರವೇ ಮಾತ್ರ ಅವಳು ತನ್ನ ಪ್ರೀಯ ಮಗನನ್ನು ತನ್ನ ತೋಳುಗಳಲ್ಲಿ ತೆಗೆದುಕೊಂಡಳು (ವಚನ 37ಬಿ). ಅದಾದ ಮೇಲೆ ವೇದಭಾಗವು ಸರಳವಾಗಿ "ಅವಳು ಹೊರಟು ಹೋದಳು" (ವಚನ 37ಸಿ) ಎಂದು ಹೇಳು ತ್ತದೆ, ಅಲ್ಲಿಂದ ಹೊರಡುವಾಗ ಅಲ್ಲಿ ಸಂತೋಷದ ಕಣ್ಣೀರು ಹರಿಯುತ್ತಿರುವುದನ್ನು ನಾವು ಊಹಿಸಬಹುದು. ಅವಳ ಮಗನು ಮುಂಚಿನಂತೆಯೇ ಅಮೂಲ್ಯನಾಗಿದ್ದನು, ಆದರೆ ಅವನೊಂದಿಗಿನ ಅವಳ ಪ್ರತಿಯೊಂದು ಘಳಿಗೆಯು ದೇವರ ವಿಶೇಷ ಕಾಣಿಕೆಯಾಗಿತ್ತು. ದಿನಗಳು ಕಳೆದ ಮೇಲೆ, ಅವಳ ಮಗನು ಬಲಯುತನೂ ಮತ್ತು ಎತ್ತರವೂ ಆಗುತ್ತಿರುವಾಗ, ಅವಳು ಖಚಿತವಾಗಿ ಪರಲೋಕಕ್ಕೆ ವಂದನೆಗಳ ಪ್ರವಾಹ ವನ್ನೇ ಹರಿಸಿರಬೇಕು.

## ಗಲಿಬಿಲಿ ಮತ್ತು ಸಮಾಧಾನ

### ಗಲಿಬಿಲಿ

ಸ್ತ್ರೀಯು ತನ್ನ ಮಗನನ್ನು ಕಳೆದುಕೊಂಡಿದ್ದರ ಬಗೆಗೆ ಮತ್ತು ಅವಳ ಆನಂತರದ ಗಲಿಬಿಲಿಯು ಮುತ್ತು ದುಃಖ ಇವನ್ನು ನಿಮಲ್ಲಿ ಕೆಲವರು ಅವಳೊಂದಿಗೆ ನೀವು ಗುರುತಿಸಬಹುದಾಗಿದೆ. ಬಹುಶಃ ಕಷ್ಟಗಳು ನಿಮ್ಮ ಜೀವನದಲ್ಲಿ ಬಂದಿರಬಹುದು ಮತ್ತು ಯಾಕೆ ಎಂಬುದನ್ನು ಅರ್ಥೈಸಿಕೊಳ್ಳುವದು ನಿಮಗೆ ಕಷ್ಟಕರವಾಗುತ್ತದೆ. ನಿಮ್ಮ ಕುಟುಂಬಕ್ಕೆ ಅವಶ್ಯವಿರುವ ನಿಮ್ಮ ಉಳಿತಾಯವನ್ನೆಲ್ಲಾ ಕಬಳಿಸಲ್ಪಟ್ಟಿರಬಹುದು. ನಿಮ್ಮ ಸಂಗಾತಿಯು ನಿಮ್ಮನ್ನು ತೊರೆದು ಮತ್ತು ಮಕ್ಕಳನ್ನು ನಿಮ್ಮ ಮೇಲೆ ಪೋಷಣೆಗೆ ಬಿಟ್ಟು ಹೋಗಿರಬಹುದು.

ಶೂನೇಮ್ಯಳಂತೆಯೇ ನೀವು ಪ್ರೀತಿಯಿಂದ ಬೆಳೆಸಿದ ಮಕ್ಕಳು ಕುಡಾ ಮರಣಹೊಂದಬಹದು. ದುರಂತಗಳಲ್ಲಿ ನೀವು ಜೋರಾಗಿ "ನಾನು ಅರ್ಥೈಸಿಕೊಳ್ಳಲಾರೆ! ಇದು ನನಗೆ ಯಾಕೆ ಸಂಭವಿಸುತ್ತದೆ" ಎಂದು ಕೂಗಿದ ಸಮಯಗಳಿರಬಹುದು.

**ಸಮಾಧಾನ**

ದುರಂತವು ನಿಮ್ಮನ್ನು ಛಿದ್ರಮಾಡಿದಾಗ್ಯೂ, ನೀವು ಸಮಾಧಾನವನ್ನು ಕಂಡುಕೊಳ್ಳ ಬಹುದು ಎಂಬುದಕ್ಕೆ ನಮ್ಮ ವೇದ ಭಾಗವು ಎರಡು ವಿವರಗಳನ್ನು ಕೊಡುತ್ತದೆ: 1) ತಾಯಿಯು ಎಲೀಷನಿಗೆ ದೂರುಕೊಟ್ಟಾಗ, ಪ್ರವಾದಿಯು ಆಕೆಯನ್ನು ಖಂಡಿಸಲಿಲ್ಲ. ನೀವು ನಿಮ್ಮ ಸಮಸ್ಯೆಗಳಿಂದ ಮಿತಿಮೀರಿದಾಗ, ದೇವರು ಅರಿತುಕೊಳ್ಳುತ್ತಾನೆ ಮತ್ತು ಆತನು ಇನ್ನು ನಿಮ್ಮನ್ನು ಪ್ರೀತಿಸುತ್ತಾನೆ. 2) ಕೊನೆಯಲ್ಲಿ ದೇವರು ಆ ತಾಯಿಯ ಹೃದಯದ ನೋವನ್ನು ಆಳಿಸಿಹಾಕಿದನು ಮತ್ತು ಪ್ರತಿಯೊಂದು ಸರಿಯಾಗಿಯೇ ಪರಿವರ್ತಿತವಾಯಿತು. 2 ಅರಸು 4:18-37ರಲ್ಲಿ ಮಾಡಿದ ಹಾಗೆ ದೇವರು ನಿಮ್ಮ ಸಮಸ್ಯೆಗಳನ್ನು ತೆಗೆದು ಹಾಕಿಬಿಡುವನು ಎಂದು ನಾನು ನಿಮಗೆ ವಾಗ್ದಾನ ಮಾಡುವುದಿಲ್ಲ, ಆದರೆ ಆತನು ನಿಮ್ಮ ಸಂಕಷ್ಟಗಳನ್ನು ಹೊತ್ತುಕೊಳ್ಳುವಂತೆ ನಿಮಗೆ ಶಕ್ತಿಯನ್ನು ಕೊಡುವನು ಮತ್ತು ವಿಜಯವು ಅವುಗಳ ಮೇಲಾಗುವದು ಎಂದು ನಾನು ವಾಗ್ದಾನ ಮಾಡುವವನಾಗಿದ್ದೇನೆ. ದೇವರು "ದೇವರ ಸಂಕಲ್ಪದಿಂದ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುವವರಿಗೆ" (ರೋಮಾಪುರ 8:28) ಇನ್ನೂ ದೇವರಾಗಿದ್ದಾನೆ.

*ಸಂಗತಿಗಳು ಯಾವಾಗಲೂ ತಾವು ಕಂಡಂತೇ ಇರುವುದಿಲ್ಲ* ಎಂಬ ನಂಬಿಕೆಯ ಜೀವನದುದ್ದಕ್ಕೂ ಜೀವಿಸಿರುವವರು ಕಲಿಯುವ ಮಹತ್ವದ ತತ್ವವು ಇದಾಗಿದೆ. ಇದನ್ನು ದೃಷ್ಟಾಂತೀಕರಿಸುವ ಒಂದು ಕಥೆಯನ್ನು ನಾನು ಇತ್ತೀಚೆಗೆ ಕೇಳಿದೆನು.[18] 1900ರಲ್ಲಿ ಜೀವಿ ಸಿದ್ಧ ಒಬ್ಬ ಮನುಷ್ಯನು ನವೀನವಾದ ಸಮುದ್ರ ಮಾರ್ಗದಲ್ಲಿ ಸುಪ್ರಸಿದ್ಧವಾದ ಹಡುಗೊಂದರ ಸಂಗೀತಗಾರನಾಗಿ ಬಾಡಿಗೆಗೆ ಹೋದನು. ಇದೊಂದು ದೊಡ್ಡ ಮರ್ಯಾದೆಯಾಗಿತ್ತು, ಆತನು ಬಲು ಉತ್ಸುಕನಾಗಿದ್ದನು. ಆತನು ತನ್ನ ಸಂಗೀತ ವಾದ್ಯಗಳನ್ನು ಮುಂದಾಗಿ ಹಡಗಿಗೆ ಕಳುಹಿಸಿದನು; ಆದರೆ ಆತನು ಹಡಗುಕಟ್ಟೆಯ ಮಾರ್ಗದಲ್ಲಿರುವಾಗಲೇ, ಆತನು ಅಪಹರಿಸಲ್ಪಟ್ಟನು ಮತ್ತು ಆತನು ಪೂರ್ವಕ್ಕೆ ತೆಗೆದುಕೊಂಡು ಹೋಗಲ್ಪಟ್ಟನು. "ಇದು ನನಗೆ ಯಾಕೆ ಸಂಭವಿಸಿತು? ಇದು ನನ್ನ ದೊಡ್ಡ ಅವಕಾಶವಾಗಿತ್ತು, ಏನಾಯಿತು ನೋಡಿ! ಇದು ಸಂಭವಿಸಿದ್ದು ಬಲು ಕೆಟ್ಟದ್ದಾಗಿದ್ದುದು! ನನ್ನ ಜೀವಿತದಲ್ಲಿ ಅತಿ ಕೆಟ್ಟದಾದ ಸಂಗತಿ ಇದಾಗಿದೆ! ಇದು ಯಾಕೆ ಸಂಭವಿಸಿತು? ಯಾಕೆ?" ಎಂಬುದನ್ನು ನೋಡಿದರೆ ಆತನ ಯೋಚನೆಗಳು ಎಷ್ಟು ನಕಾರಾತ್ಮಕವಾಗಿರಬಹುದು ಎಂದು ಯಾರಾದರೂ ಊಹಿಸಬಹುದು. ತದನಂತರ ಆ ಮನುಷ್ಯನು ತಪ್ಪಿಸಿಕೊಂಡಿದ್ದನು ಮತ್ತು ಚೀನಾದ ಮಾರ್ಗಕ್ಕೆ ಆತನು ಹೊರಟು ಹೋದನು. ಅಲ್ಲಿ ಆತನಿಗೆ ತಾನು ಪ್ರಯಾಣ ಮಾಡಬೇಕೆಂದು ನಿಗದಿಗೊಳಿಸಲ್ಪಟ್ಟ ಹಡಗು ಅದು ಮುಳುಗಿತ್ತು ಇದರ ಪರಿಣಾಮವು 1,500 ಜೀವಗಳು ಕಳೆದುಹೋದವು ಅದು ಟೈಟಾನಿಕ್ ಆಗಿತ್ತು.[19] ನನ್ನ ಸಂಶಯವೆಂದರೆ ಆ ಮನುಷ್ಯನು ಬಹುಶ ತನ್ನ ಅಪಹರಣಕಾರರಿಗೆ ವಂದನೆಗಳನ್ನು ತಿಳಿಸಿರಬೇಕು, ಆದರೆ ಆತನ ಮೇಲೆ ಬಿದ್ದ ದುರಂತದಿಂದಾಗಿ ಅವನ ಮನೋಭಾವನೆಯು ಬದಲಾಯಿತೇ?

ವರುಷಗಳುದ್ದಕ್ಕೂ ಅನೇಕ ಕ್ರೈಸ್ತರು ಹಿಂದಿನ ವಿನಾಷನದ ಬಗೆಗೆ ಹೇಳುತ್ತಿರುವುದನ್ನು ಕೇಳಿದ್ದೇನೆ ಮತ್ತು ಆ ದುರಂತಗಳಿಗಾಗಿ ಅಲ್ಲದಿದ್ದರು ಆ ದುರಂತಗಳ ನಿಮಿತ್ತವಾಗಿಯೇ ಪ್ರಸ್ತುತ ಆಶೀರ್ವಾದಗಳನ್ನು ಪಡೆದಿರುವವರಾಗಿದ್ದಾರೆ ಎಂಬುದನ್ನು ಸೇರಿಸುವವರಾಗಿ ದ್ದಾರೆ.[20] ಕೆಲಸಾರಿ ಅವರು "ಇದು ನನಗೆ ಸಂಭವಿಸಿದ್ದು ಒಳ್ಳೆಯದಾಯಿತು" ಎಂದೂ ನಿರ್ಧಾರಿಸುವವರಾಗಿರುತ್ತಾರೆ!

ನಮ್ಮ ಕಥೆಯಲ್ಲಿ ಎರಡು ಸಾರಿ, ದುಃಖದಲ್ಲಿರುವ ಆ ತಾಯಿಯು ಅವಳ ಹೃದಯದಲ್ಲಿ ಇದು ಇಲ್ಲ ಎಲ್ಲವೂ ಸರಿಯಾಗಿದೆ ಎಂದಿದ್ದಾಗಲೂ ಕೂಡಾ "ಚಿಂತೆಯಿಲ್ಲ" (ವಚನ 26; ನೋಡಿರಿ 23) ಎಂದು ಹೇಳುತ್ತಾಳೆ (ವಚನ 28). ನಂತರದಲ್ಲಿ ಆಕೆಯು ಆಶ್ಚರ್ಯದಿಂದ ಹಿಂದಕ್ಕೆ ನೋಡಿದಳು ಮತ್ತು "ಪ್ರತಿಯೊಂದು ನಿಜವಾಗಿಯೂ ಸರಿಯಾಗಿದೆ, ಆ ಸಮಯದಲ್ಲಿ ನಾನು ಅದನ್ನು ಅರಿತುಕೊಳ್ಳಲಿಲ್ಲವೇಕೆ"? ಎಂದು ಯೋಚಿಸಿದಳು. ಒಂದು ವೇಳೆ ನೀನು ದೇವರ ನಂಬಿಗಸ್ತ ಮಗುವಾಗಿದ್ದರೆ, ಯಾವುದೇ ಸಮಯದಲ್ಲಿ, ಯಾವುದೇ ಸ್ಥಿತಿಯಲ್ಲಿ ನೀನು ವಿಶ್ವಾಸದಿಂದ "ಎಲ್ಲವೂ ಸರಿಯಾಗಿ ಇರುತ್ತದೆ" ಎಂದು ಹೇಳಬಹುದು!

ನದಿಯ ಹಾಗಿನ ಶಾಂತತೆ ನನ್ನ ಮಾರ್ಗದಲ್ಲಿ ಪ್ರಸ್ತುತವಿರುವಾಗ,
ನನ್ನ ದುಃಖಗಳು ಸಮುದ್ರದ ಅಲೆಗಳ ಸುರುಳಿಯಂತಾದಾಗ;
ನನ್ನ ಭಾಗ ಏನೇ ಇರಲಿ, ಅದು ನನಗೆ ಹೇಳಲೆಂದು ಕಲಿಸುತ್ತದೆ,[21]
"ಇದು ಸರಿ ಇದು ನನ್ನ ಆತ್ಮದೊಂದಿಗೆ ಸರಿ."

ಕರ್ತನಲ್ಲಿ ನಿಮ್ಮ ನಂಬಿಕೆಯನ್ನು ಕಾದುಕೊಳ್ಳಿರಿ ಮತ್ತು ಆತನ ಮೇಲೆ ಆತುಕೊಳ್ಳುವುದನ್ನು ಮುಂದುವರೆಸಿರಿ, ಮತ್ತು "ಎಲ್ಲವೂ ಸರಿಯಾಗಿ ಇರುತ್ತದೆ" ಈ ಮಾತುಗ ಳು ನಿಮ್ಮ ಜೀವನದ ಗುರಿಯಾಗಿರಲಿ. ದೇವರು ಯೆಶಾಯ ಪ್ರವಾದಿಗೆ ನೀತಿವಂತರಿಗೆ ಇರುವ ಭರವಸದ ಬಗೆಗೆ ಹೀಗೆ ಹೇಳುತ್ತಾನೆ "ಶಿಷ್ಟರಿಗೆ ಶುಭವೇ" (ಯೆಶಾಯ 3:10). ನಿಮ್ಮ ಕರ್ತನಿಗೆ ನಂಬಿಗಸ್ತರಾಗಿರಿ, ನೀವು ದುಃಖವನ್ನು ತಲುಪುವ ಪ್ರತಿಯೊಂದು, ಅಥವಾ ಅನಿರ್ಧಿಷ್ಟ ಅಥವಾ ವಿನಾಷದ ಸಂದರ್ಭದಲ್ಲಿಯೂ ಇದು ನಿಮ್ಮೊಂದಿಗೆ ಯಾವಾಗಲೂ ಇರುತ್ತದೆ; ಇದು ನಿಮ್ಮೊಂದಿಗೆ ಒಳ್ಳೇಯದಾಗಿ ನ್ಯಾಯ ತೀರ್ಪಿನ ದಿನದಲ್ಲೂ ಇರುತ್ತದೆ ಮತ್ತು ನಿತ್ಯತ್ವದಲ್ಲಿ ಹಿಂಬಾಲಿಸುವುದಾಗಿರುತ್ತದೆ.[22]

## ಮುಕ್ತಾಯ

ನಾನು ಮುಗಿಸುತ್ತಿದ್ದಂತೆಯೇ, ಗೇಹಜಿಯು ಆ ಸ್ತ್ರೀಗೆ "ಎಲ್ಲವೂ ಕ್ಷಮಿಸುವವೋ?" ಎಂದು ಕೇಳಿದಂತೆಯೇ ನಾನು "ನಿನ್ನ ಮತ್ತು ದೇವರ ಮಧ್ಯೆ ಕ್ಷೇಮವವೋ, ನಿನ್ನ ಆತ್ಮದೊಂದಿಗೆ ಕ್ಷೇಮವಿದೆಯಾ?" ಎಂಬ ಪ್ರಶ್ನೆಯನ್ನು ಕೇಳಬಯಸುತ್ತೇನೆ. "ಜಗತ್ತು ನಿಮ್ಮನ್ನು ನೋಡಿ ನಗಬಹುದು, ಸ್ನೇಹಿತರು ಅಣಿಕಿಸಬಹುದು, ನಿನ್ನ ಸ್ವಂತದ ಹೃದಯವು ನಿನಗೆ ಮೋಸ ಮಾಡಬಹುದು"[23] ಆದರೆ ದೇವರೊಂದಿಗಿನ ನಿನ್ನ ಸಂಬಂಧವು ಕ್ಷೇಮವಾಗಿಲ್ಲದಿದ್ದರೆ, ನಿನ್ನ ಜೀವನದ ಯಾವದೂ ಕ್ಷೇಮವಾಗಿರಲು ಸಾಧ್ಯವೇ ಇಲ್ಲ. ಆತನ ಪ್ರೀತಿಯ ವಿಧೆಯತೆಯಲ್ಲಿ ಬರುವದು ನಿಮಗೆ ಅವಶ್ಯವಿದೆಯಾ? (ಮಾರ್ಕ 16:16; ಇಬ್ರಿಯ 5:9) ಹೀಗೆ ಆತನು ತನ್ನ ಮಗುವಿನಂತ ನಿನ್ನನ್ನು ಅಪ್ಪಿಕೊಳ್ಳ ಬಹುದೇ (ಗಲಾತ್ಯ 3:26, 27)? ನೀವು ಅವಿಧೇಯ ಮಕ್ಕಳಾಗಿದ್ದಾದರೆ ಇದು ಸಾಧ್ಯವೇ? ಹಾಗಿದ್ದಲ್ಲಿ, ನಿನಗೆ ಆತನೆಡೆಗೆ ತಿರುಗಿಕೊಳ್ಳುವದು ಅವಶ್ಯವಿದೆ (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9). ನಿಮ್ಮ ಆತ್ಮೀಕ ಅವಶ್ಯಕತೆಯು ಏನೇ ಇರಲಿ, ಆತನ ಕೃಪೆಯಲ್ಲಿ ಮತ್ತು ಆತನ ಕರುಣೆಯಲ್ಲಿ ನಿಮ್ಮನ್ನು ನೀವು ಇಂದೇ ಒಪ್ಪಿಸಿಕೊಡಿರಿ, ಹಾಗಿದ್ದಲ್ಲಿ ನೀವೂ ಕೂಡಾ ಹೇಳುವಿರಿ "ಎಲ್ಲವೂ ಸರಿಯಾಗಿ ಇರುತ್ತದೆ!"

---

ಟಿಪ್ಪಣೆಗಳು

[1]Donald J. Wiseman, *1 and 2 Kings: An Introduction and Commentary*, Tyndale Old Testament Commentaries (Downers Grove, Ill.: Inter-Varsity Press, 1993), 204.

[2]Charles B. Clayton, ed., "headache," *The American Medical Association Home Medical Encyclopedia* (New York: Random House, 1989), 1:507. ರಕ್ತನಾಳಗಳು ಉಬ್ಬಿಕೊಳ್ಳುವ ರೋಗವು ರಕ್ತನಾಳಗಳು ಊತುಕೊಳ್ಳುವಂತೆ ಮಾಡುತ್ತದೆ. ಈ ಪ್ರಕರಣದಲ್ಲಿ ಈ ರಕ್ತನಾಳಗಳು ಮೆದುಳಿನಲ್ಲಿನ ರಕ್ತನಾಳಗಳಾಗಿರಬಹುದು. [3]Adapted from J. T. Headley, *Sacred Heroes and Martyrs*, rev. and ed. J. W. Kirton (London: Ward, Lock, & Tyler, n.d.), 194. [4]G. Rawlinson, "2 Kings," *The Pulpit Commentary*, vol. 5, *1 & 2 Kings*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 66. [5]Wiseman, 204. [6]C. F. Keil and F. Delitzsch, "1 and 2 Kings," *Commentary on the Old Testament*, vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendriksen Publishers, 1989), 311. [7]C. H. Irwin, *Irwin's Bible Commentary* (Philadelphia: John C. Winston Co., 1928), 116. [8]Keil and Delitzch, 311. [9]ಆ ಸ್ತ್ರೀಯು ತನ್ನ ಗಂಡನಿಗೆ ತಮ್ಮ ಮಗನು ಸತ್ತಿದ್ದಾನೆ ಎಂದು ಯಾಕೆ ಹೇಳಲಿಲ್ಲ? ಬಹುಶಃ ಆಕೆಯ ಗಂಡನು ಹೂಣುವ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಸೂಚಿಸಬಹುದೆಂಬ ಭಯವು ಅವಳಲ್ಲಿ ಇದ್ದಿರಬಹುದು. ಆತನ ಮರಣದ ಕಥೆಯನ್ನು ಆತನು ಜೀವಂತನಾಗಿರುವುದನ್ನು ತೋರಿಸಿ ಹೇಳಬೇಕೆಂದಿದ್ದಳೇನೋ. [10]Keil and Delitzsch, 311-12.

[11]J. Robert Vannoy, notes on 2 Kings, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 530. [12]ವಾಸ್ತವವಾಗಿ ಮನೆಯೊಳಗೆ ಹೋಗಿ ಹುಡುಗನ ಮುಖದ ಮೇಲೆ ಕೋಲನ್ನು ಇಡ ಬೇಕು ಎಂಬುದನ್ನು ಗೇಹೆಜಿಯು ಬಲ್ಲವನಾಗಿದ್ದನು (ವಚನ 31) ಇದು ಆಸ್ತ್ರೀಯು ಇನ್ನೂ ಹೆಚ್ಚಿನ ವಿವರಗಳನ್ನು ಕೊಟ್ಟಳು ಎಂಬುದನ್ನು ಸೂಚಿಸುವುದಾಗಿದೆ. [13]Keil and Delitzsch, 312-13. [14]On ಒಂದು ಸಂದರ್ಭದಲ್ಲಿ ಪೌಲನು ಮುಟ್ಟಿದ ಬಟ್ಟೆಯ ತುಂಡು ರೋಗಿಗಳನ್ನು ಸ್ವಸ್ಥ ಮಾಡಿತು (ನೋಡಿರಿ ಅಪೊಸ್ತಲರ ಕೃತ್ಯಗಳು 19:11, 12). [15]David Roper, "When the Roof Caves In," in "Elijah, 1," *Truth for Today* (August 1993): 24. [16]"ಗ್ರೀಕ್ ವೇದಭಾಗದಲ್ಲಿ (ಹಳೆಯ ಒಡಬಡಿಕೆಯ ಗ್ರೀಕ್ ಭಾಷಾಂತರಗಳು) ಸೀನುವಿಕೆಯ ಬಗೆಗೆ ಯಾವ ಆಧಾರಗಳು ಇಲ್ಲ, ಆದರೆ ಎಲೀಷನು ಆ ಮಗುವಿನ ಮೇಲೆಏಳು ಸಾರಿ ಬೋರ್ಲು ಬಿದ್ದನು ಎಂದು ಇದು ಸೂಚಿಸುವುದಾಗಿದೆ" (Clyde M. Miller, *First and Second Kings*, The Living Word Commentary series, vol. 7 [Abilene, Tex.: A.C.U. Press, 1991], 328). [17]ಇಂದಿಗೂ ಕೂಡಾ ಮಕ್ಕಳು, ಸುಗ್ಗಿಯ ಹೊಲದಲ್ಲಿನ ಧೂಳಿನ ತುಫಾಕಿನ ಅಸ್ಥಮದಿಂದ ಮರಣ ಹೊಂದುತ್ತಿದ್ದಾರೆ ಎಂದು ನನ್ನ ಬೈಬಲ್ ಕ್ಲಾಸಿನಲ್ಲಿಯ ಒಬ್ಬ ದಾದಿಯು ಸೂಚಿದಳು. [18]ಈ ಕಥೆಯು ನನಗೆ Angi (Roper) Lovejoy, ಇವರಿಂದ ಹೇಳಲ್ಪಟ್ಟದ್ದು. Edmond, Oklahoma, 22 July 2003. Angi ಯವರು, ಈ ಕಥೆಯನ್ನು ಓಕ್ಲಹೋಮಾ ಪಟ್ಟಣದಲ್ಲಿ, ಟೈಟಾನಿಕ್ ಪ್ರದರ್ಶನದಲ್ಲಿ ಪ್ರದರ್ಶಿಸಿದ ಕಥೆಯನ್ನು ಓದಿದರು. [19]The ಟೈಟಾನಿಕ ಒಂದು ದೊಡ್ಡ ಪ್ರಯಾಣಿಕರ ಹಡಗಾಗಿದ್ದು ಆ ಸಮಯದವರೆಗೂ ಕಟ್ಟಲ್ಪಟ್ಟಿರಲಿಲ್ಲವಾದ ಇದ್ದರ ನವೀನ ಸಮುದ್ರಯಾನದಲ್ಲಿಯೇ ಹಿಮಬಂಡೆಗೆ ಬಡಿದು ಮುಳುಗಿ ಹೋಯಿತು (14-15 ಎಪ್ರಿಲ್ 1912). [20]ನೀವು ಉದಾಹರಣೆಗಳನ್ನು ಎರಡು ನಿಮ್ಮ ಸ್ವಂತದವುಗಳಿಂದ ಅಥವಾ ಇತರರ ಅನುಭವಗಳಿಂದ ಕೂಡಿಬಹುದು.

[21]Horatio G. Spafford, "It Is Well with My Soul," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [22]Henry Blunt, *Lectures on the History of Elisha* (Philadelphia: Herman Hooker, 1839), 81. [23]Ibid., 79.